ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 37 | ನವೆಂಬರ್ 25, 1979 | 40 ಪೈಸೆ

ಸಕ್ಕರೆ, ಸೀಮೆಎಣ್ಣೆಗಳ ಅಭಾವ

ಇತ್ತೀಚೆಗೆ ಏರುತ್ತಿರುವ ಎಲ್ಲ ಸಾಮಗ್ರಿಗಳ ಬೆಲೆಯಿಂದ ಸಾಮಾನ್ಯ ಜನತೆಯ ಜೀವನ ತತ್ತರಿಸುವಂತಾಗಿದೆ. ಎಲ್ಲ ನಿತ್ಯೋಪಯೋಗಿ ವಸ್ತುಗಳ ಬೆಲೆಗಳೂ ಗಗನಕ್ಕೇರಿವೆ, ಇನ್ನೂ ಏರುತಲೇ ಇವೆ. ಇದರೊಂದಿಗೆ ಸಕ್ಕರೆ, ಸೀಮೆಎಣ್ಣೆಗಳು ಕಣ್ಮರೆಯಾಗಿವೆ. ಅಂಗಡಿಗಳಲ್ಲಿ ದೊರೆಯುವುದೇ ದುರ್ಲಭವಾಗಿದೆ.

ಕಳೆದ ಕೆಲವು ವಾರಗಳಿಂದ ಸೀಮೆಎಣ್ಣೆಗೆ ಬೆಂಗಳೂರಿನ ನಾಗರಿಕರು ಅನುಭವಿಸುತ್ತಿರುವ ಕಷ್ಟವನ್ನು ವಿವರಿಸಲು ಸಾಧ್ಯವಿಲ್ಲ. ಸೀಮೆಎಣ್ಣೆಯ ಗಾಡಿ ಯಾವಾಗ ಬರುತ್ತದೆಂದು ಹೇಳಲು ಸಾಧ್ಯವಾಗುತ್ತಿಲ್ಲ. ಅದರ ದಾರಿ ಕಾಯುತ್ತಿರುವ ನೂರಾರು ಜನ ಡಬ್ಬ ಹಿಡಿದುಕೊಂಡು ಗಂಟೆಕಟ್ಲೆ ಕಾಯುತ್ತಿರುವುದು ಸಾಮಾನ್ಯ ದೃಶ್ಯವಾಗಿದೆ. ಅದರಲ್ಲಿ ಕೆಲವರಿಗೆ ಸಿಗುತ್ತದೆ. ಆದರೆ ಅನೇಕರು ನಿರಾಶರಾಗಿ ಮನೆಗೆ ಮರಳಬೇಕಾಗಿದೆ. ರೇಷನ್ ಅಂಗಡಿಯವರೂ, ಸೀಮೆಎಣ್ಣೆ ಗಾಡಿಯವರೂ ಸೇರಿಕೊಂಡು ಜನರನ್ನು ಸುಲಿಯುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳದಿರುವುದು ಖಂಡನೀಯವಾಗಿದೆ.

ಈಗ ಸಕ್ಕರೆಯು ಮಾಯವಾಗಿದೆ. ಊರೆಲ್ಲ ಸುತ್ತಿದರೂ ಸಕ್ಕರೆ ಸಿಗುತ್ತಿಲ್ಲ. ಬೆಲೆ ಕೆ.ಜಿ.ಗೆ 4ರೂ. ಗೇರಿತು. ಈಗ ಆ ಬೆಲೆಗೂ ದೊರೆ

ಸಂಪಾದಕೀಯ

ಯುವುದಿಲ್ಲ. ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಕ್ಕರೆ ಉತ್ಪಾದನೆಯಾಗುತ್ತಿದ್ದು, ದಾಸ್ತಾನಿರುವುದರಿಂದ ಸರಕಾರ ಇದರ ಮೇಲಿನ ನಿಯಂತ್ರಣವನ್ನು ತೆಗೆದುಹಾಕಿತು. ಈಗ ದಾಸ್ತಾನು ಕಡಿಮೆಯಾಗಿದೆಯೆಂದೂ, ಉತ್ಪಾದನೆಯೂ ಇಳಿದಿದೆಯೆಂದೂ ಅಧಿಕೃತವಾಗಿ ಹೇಳಲಾಗುತ್ತಿದೆ. ಹಾಗಾದರೆ ಬೆಲೆ ನಿಯಂತ್ರಣದಿಂದ ಏನು ಪ್ರಯೋಜನ? ಕಳ್ಳದಾಸ್ತಾನುಗಾರರಿಗೂ ವ್ಯಾಪಾರಸ್ಥರಿಗೂ ಇದರಿಂದ ಲಾಭ. ಆದ್ದರಿಂದ ಜನತೆಗೆ ಸಕ್ಕರೆ ಸಿಗಬೇಕಾದರೆ ಸಕ್ಕರೆ ಕಾರ್ಖಾನೆಗಳನ್ನು ರಾಷ್ಟ್ರೀಕರಿಸಬೇಕು ಮತ್ತು ಅದರ ವಿತರಣೆಯನ್ನು ಸರಕಾರ ವಹಿಸಿಕೊಳ್ಳುವುದು ಅಗತ್ಯ.

ಕೇಂದ್ರ ಸರಕಾರ ಸ್ಥಾನಬದ್ಧತಾ ತುರ್ತುಶಾಸನವನ್ನು ಜಾರಿಗೆ ತಂದಿದೆ. ಅದನ್ನು ರಾಜ್ಯ ಸರಕಾರವೂ ಜಾರಿಗೊಳಿಸಿದೆ. ಆದರೆ ಈವರೆಗೆ ಯಾರ ಮೇಲೂ ಕ್ರಮ ತೆಗೆದುಕೊಳ್ಳಲಿಲ್ಲ. ಲಾಭಕೋರರ ಈ ಸುಲಿಗೆಯನ್ನೆದುರಿಸಲು ಸರ್ಕಾರ ಕ್ರಮ ಕೈಗೊಳ್ಳದಿದ್ದಲ್ಲಿ ಸಾಮಾನ್ಯ ಜನತೆಗೆ ಸರಕಾರದ ಮೇಲೆ ನಂಬಿಕೆ ಹೋಗಲು ಸಾಧ್ಯವಿದೆ. ಜನರ ತಾಳ್ಮೆಗೂ ಒಂದು ಮಿತಿ ಇದೆ. ಪರಿಸ್ಥಿತಿ ಕೈಮೀರಿ ಹೋಗುವ ಮೊದಲೇ ಸರ್ಕಾರ ಉಗ್ರ ಕ್ರಮ ವಹಿಸಿ ಈ ಅತ್ಯವಶ್ಯಕ ಸಾಮಗ್ರಿಗಳನ್ನು ಜನತೆಗೆ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ನಾವು ಒತ್ತಾಯಪಡಿಸುತ್ತೇವೆ. ●

ಮಂಗಳೂರಲ್ಲಿ ರೈತ-ಕಾರ್ಮಿಕರ ಭಾರಿ ಮತ ಪ್ರದರ್ಶನ

ಮಂಗಳೂರಿನ ಚರಿತ್ರೆಯಲ್ಲೆ ಕಳೆದ ಕೆಲವು ವರ್ಷಗಳಲ್ಲಿ ನಡೆದಿರದಷ್ಟು ದೊಡ್ಡದಾದ ಮೆರವಣಿಗೆ ದ. ಕ. ಜಿಲ್ಲೆಯ ಎಲ್ಲಾ ಎಂಟು ತಾಲ್ಲೂಕುಗಳಿಂದ ಬಂದ ರೈತಕೃಷಿ ಕೂಲಿಗಾರರು, ನಗರದ ಬೇರೆಬೇರೆ ವಿಭಾಗಗಳಿಗೆ ಸೇರಿದ ಕಾರ್ಮಿಕರು ತಾ. 21-11-79ರಂದು ಮಧ್ಯಾಹ್ನದ ಮೇಲೆ ನಾಲ್ಕು ಗಂಟೆಗೆ ಮಂಗಳೂರಿನಲ್ಲಿ ಜಿಲ್ಲಾಧಿಕಾರಿಯವರ ಕಛೇರಿಯ ಆವರಣದೊಳಗೆ ಬೃಹತ್ ಮತಪ್ರದರ್ಶನ ನಡೆಸಿದರು. ದ. ಕ. ಜಿಲ್ಲಾ ಸಿ.ಐ.ಟಿ.ಯು. ಮತ್ತು ರೈತಸಂಘಗಳ ಕರೆಯ ಮೇರೆಗೆ ಈ ಬೃಹತ್ ಪ್ರತಿಭಟನಾ ಕಾರ್ಯಕ್ರಮ ಜರುಗಿತು. 21ರ ಪ್ರತಿಭಟನಾ ಕಾರ್ಯಕ್ರಮಕ್ಕೆ ಕುಂದಾಪುರ ಉಡುಪಿ, ಬೆಳ್ತಂಗಡಿ, ಬಂಟ್ವಾಳ ಗುರುಪುರ ಹೀಗೆ ಬೇರೆಬೇರೆ ಪ್ರದೇಶಗಳಿಂದ ರೈತರ ಕಾಲ್ನಡಿಗೆ ಜಾಥಾಗಳು ಬಂದಿದ್ದವು.

ಕಾರ್ಮಿಕರ ಮತ್ತು ಹಳ್ಳಿಯ ಬಡವರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರಗಳನ್ನು ಅರ್ಪಿಸಿದ ಮೇಲೆ ನೆರೆದ ಸಹಸ್ರಾರು ರೈತ-ಕಾರ್ಮಿಕರು ಮೆರವಣಿಗೆಯ ಮೂಲಕ ನಗರದ ಕೆಲವು ಮುಖ್ಯ ಬೀದಿಗಳಲ್ಲಿ ಸುತ್ತಾಡಿ ನೆಹರೂ ಮೈದಾನಕ್ಕೆ ಬಂದರು, ಸಂಜೆ 6ಘಂಟೆಗೆ ನೆಹರೂಮೈದಾನದಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷ ಸ್ಥಾನವನ್ನು ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಅಬ್ರಹಾಂ ಕರ್ಕಡ ವಹಿಸಿದ್ದರು. ಸ್ವಾಗತ ಭಾಷಣ ಮಾಡಿದ ಸಿ. ಐ. ಟಿ. ಯು. ಮುಖಂಡ ಕಾಂ. ಮೂಸಬ್ಬನವರು ಕಾರ್ಮಿಕರು ಮತ್ತು ರೈತರು ಆರ್ಥಿಕ ಹೋರಾಟ ನಡೆಸುವುದರೊಂದಿಗೆ ರಾಜಕೀಯ ಪ್ರಜ್ಞೆ ಬೆಳೆಸಬೇಕೆಂದು ಹೇಳಿದರು.

ರೈತ-ಕಾರ್ಮಿಕರಿಗೆ, ಶೋಷಿತ ಜನಕ್ಕೆ ನ್ಯಾಯದೊರೆಯುವುದು ಸಂಘಟನೆ ಮತ್ತು ಹೋರಾಟಗಳಿಂದ ಮಾತ್ರ ಸಾಧ್ಯ. ಈ ಸಂಘಟನೆ ಮತ್ತು ಹೋರಾಟದ ಸ್ವಾತಂತ್ರ್ಯ ಉಳಿಸಲು ನಮ್ಮ ಎದುರು ನಿಂತಿರುವ ಸರ್ವಾಧಿಕಾರ ಮತ್ತು ಕೋಮುವಾದ ಶಕ್ತಿಗಳನ್ನು ಸೋಲಿಸಬೇಕೆಂದು ಮುಖ್ಯ ಅತಿಥಿಯಾಗಿ ಮಾತನಾಡಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಕರೆ ಇತ್ತರು. ಕಾರ್ಮಿಕರ ಮತ್ತು ರೈತರ ಹಾಗೂ ಜನಸಾಮಾನ್ಯರ ಕೊಳ್ಳುವ ಶಕ್ತಿ ಕಡಿಮೆಯಾಗಿದೆ. ಆದರೆ, ರೈತರು ಉತ್ಪಾದಿಸುವುದಕ್ಕೆ ಬೆಲೆ ಇಲ್ಲದಾಗಿದೆ; ಮಾಲಕರು ಕಾರ್ಮಿಕರನ್ನು ಕೊಳ್ಳೆಹೊಡೆಯುತ್ತಲಿದ್ದರೆ ಸರಕಾರ ತೆಪ್ಪಗಿದೆ. ಸಂಘಟಿತ ಹೋರಾಟವೊಂದೇ ನಮ್ಮ ಮುಂದಿರುವ ದಾರಿ ಎಂದು ರೈತ-ಕಾರ್ಮಿಕ

[ಕಡೆಯ ಪುಟ ನೋಡಿ]

ಪ್ರಜಾಸತ್ತಾತ್ಮಕ, ಜಾತ್ಯಾತೀತ ಮೈತ್ರಿಕೂಟವನ್ನು ಬಲಪಡಿಸಿ

ಸಿ. ಪಿ. ಐ. (ಎಂ) ಕರೆ

ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಮತ್ತು ಜನತಾಪಕ್ಷ ಇವುಗಳೆರಡಕ್ಕೂ ಬದಲಿಶಕ್ತಿಯಾಗಿ ಬೆಳೆದು ಬರಬೇಕಾಗಿರುವ, ವಾಮಪಂಥೀಯ ಪಕ್ಷಗಳು ಮತ್ತು ಪ್ರಜಾಸತ್ತಾತ್ಮಕ, ಜಾತ್ಯತೀತ ಮೈತ್ರಿಕೂಟಕ್ಕೆ ಕಾಂಗ್ರೆಸ್ ಮತ್ತು ಲೋಕದಳಗಳ ನಡುವೆ ತಲೆದೋರಿರುವ ಕೆಲವು ಭಿನ್ನಾಭಿಪ್ರಾಯಗಳಿಂದಾಗಿ ತುಂಬಾ ಹಾನಿಯಾಗುತ್ತಿದೆ. ಈ ಮೊದಲು ನಿರ್ಧರಿಸಿರುವಂತೆ ಸಮಾನ ಕಾರ್ಯಕ್ರಮ, ಸಮಾನ ಚಿಹ್ನೆ ಮತ್ತು ಮೊದಲೇ ನಿರ್ದಿಷ್ಟಪಡಿಸಿಕೊಂಡ ಉಮೇದ್ವಾರರ ಪಟ್ಟಿಯನ್ನು ಸಿದ್ಧಪಡಿಸಿ ಇವೆರಡು ಪಕ್ಷಗಳೂ ಚುನಾವಣೆಗೆ ಇಳಿಯಬೇಕಾಗಿತ್ತು. ಚುನಾವಣಾ ಆಯೋಗವು ಕೆಲವು ತಾಂತ್ರಿಕ ಕಾರಣಗಳಿಗಾಗಿ ಆಕ್ಷೇಪವೆತ್ತಿರುವ ಕಾರಣ ಎರಡೂ ಪಕ್ಷಗಳು ಒಂದೇ ಚಿಹ್ನೆಯೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸುವುದು ಅಸಾಧ್ಯವಾಗಿದೆ. ಇಷ್ಟೇ ಅಲ್ಲದೆ ಎರಡೂ ಪಕ್ಷಗಳ ಚುನಾವಣಾ ಪ್ರಣಾಳಿಕೆಗೆ ಆಧಾರವಾಗಬೇಕಾಗಿರುವ ಕಾರ್ಯಕ್ರಮ ಮತ್ತು ಧೋರಣೆಗಳಲ್ಲೂ ಕಾಂಗ್ರೆಸ್ ಮತ್ತು ಲೋಕದಳಗಳ ನಡುವೆ ತೀವ್ರ ಭಿನ್ನಾಭಿಪ್ರಾಯವಿರುವಂತೆ ಕಂಡುಬರುತ್ತಿದೆ. ಹಾಗಾಗಿ ಸಮಾನ ಚುನಾವಣಾ ಪ್ರಣಾಳಿಕೆಯನ್ನು ಒಪ್ಪಿಕೊಳ್ಳಲೂ ಈ ಪಕ್ಷಗಳಿಗೆ ಸಾಧ್ಯವಾಗಿಲ್ಲ.

ಈ ಎರಡು ಪಕ್ಷಗಳ ನಡುವೆ ಇದೀಗ ಹೊಸದಾಗಿ ಗಾಂಧೀವಾದ-ಮತ್ತು ನೆಹರೂವಾದಗಳ ಕುರಿತಾಗಿ ದೊಡ್ಡದೊಂದು ವಿವಾದವೂ ಕಾಣಿಸಿಕೊಂಡಿದೆ. ಭಾರತದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಮತ್ತು ಸಾಮಾಜಿಕ, ಸಾಂಸ್ಕೃತಿಕ ಪ್ರಗತಿಗಾಗಿ ನಡೆದ ಜನಕೀಯ ಆಂದೋಲನಕ್ಕೆ ಗಾಂಧೀಜಿ ಮತ್ತು ನೆಹರೂ ನೀಡಿದ ಅಪಾರ ಕೊಡುಗೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೂ ಈ ಇಬ್ಬರು ನೇತಾರರು ದೇಶಕ್ಕೆ ಮುಂದಾಳುತ್ವ ನೀಡುತ್ತಿದ್ದ ಕಾಲಕ್ಕೆ ಹೋಲಿಸಿದರೆ ದೇಶ ಅಂದಿಗಿಂತ ಎಷ್ಟೋ ಮುಂದೆ ಸಾಗಿದೆ. ಅಂದಿನ ಅವಶ್ಯಕತೆಗಳೇ ಬೇರೆ, ಇಂದಿನವುಗಳೇ ಬೇರೆ. ಈ ಕಾಲದ ಸಮಸ್ಯೆಗಳನ್ನು ವಾಸ್ತವಿಕ ದೃಷ್ಟಿಯಿಂದ ಅಧ್ಯಯನಮಾಡಿ ಅದಕ್ಕೆ ಪರಿಹಾರ ಕಂಡುಕೊಳ್ಳಬೇಕೇ ಹೊರತು ಗಾಂಧೀಜಿ ಅಥವಾ ನೆಹರೂ ಅನುಸರಿಸುತ್ತಿದ್ದ ಧೋರಣೆಗಳು ನಮ್ಮನ್ನು ಬಂಧಿಸಿ ನಮ್ಮ ವಿಚಾರಶಕ್ತಿ ಮತ್ತು ದೃಷ್ಟಿಯನ್ನು ಸಂಕುಚಿತಗೊಳಿಸಬಾರದು.

ಸಿ. ಪಿ. ಐ. (ಎಂ) ಮತ್ತಿತರ ಎಡಪಕ್ಷಗಳಿಗೆ ಲೋಕದಳ ಅಥವಾ ಕಾಂಗ್ರೆಸ್ಸಿನ ಸಾಮಾಜಿಕ, ಆರ್ಥಿಕ ನೀತಿಗಳ ಬಗ್ಗೆ ಭಿನ್ನಾಭಿಪ್ರಾಯಗಳಿಲ್ಲವೆಂದಲ್ಲ. ಪ್ರತಿಯೊಂದು ಎಡಪಕ್ಷವೂ ದೇಶದ ಇಂದಿನ ಪರಿಸ್ಥಿತಿಯನ್ನು ತನ್ನದೇ ದೃಷ್ಟಿಕೋನದಿಂದ ಅಳೆದು ಅದಕ್ಕೆ ತನಗೆ ಸರಿಯೆನಿಸುವ ಪರಿಹಾರವನ್ನು ಜನತೆಯ ಮುಂದಿರಿಸುತ್ತಿದೆ. ಹೀಗಿದ್ದರೂ ನಿರಂಕುಶಾಧಿಕಾರ ಮತ್ತು ಕೋಮುವಾದದ ವಿರುದ್ಧ ನಡೆಯಲೇಬೇಕಾಗಿರುವ ಹೋರಾಟದಲ್ಲಿ ಸಮಸ್ತ ದುಡಿಯುವ ಜನತೆ ಹಾಗೂ ಸಮರಧೀರ ಮನೋಭಾವದ ಎಲ್ಲಾ ಜನರನ್ನೂ ಅಣಿನೆರೆಯಿಸಬಲ್ಲಂಥ ಧೋರಣೆಯನ್ನೂ, ಕಾರ್ಯಕ್ರಮಗಳನ್ನೂ ಕಾಂಗ್ರೆಸ್ ಹಾಗೂ ಲೋಕದಳಗಳು ರೂಪಿಸಿಕೊಳ್ಳಬಹುದೆಂಬ ಆಸೆಯನ್ನು ಎಲ್ಲಾ ಎಡಪಕ್ಷಗಳೂ ಹೊಂದಿದ್ದವು. ಆದರೆ ಲೋಕದಳ ಮತ್ತು ಕಾಂಗ್ರೆಸ್ಸಿನ ಮುಖಂಡರು ನೀಡುತ್ತಿರುವ ಕೆಲವು ಹೇಳಿಕೆಗಳೂ ಅವರ ಕೆಲವು ವರ್ತನೆಗಳೂ ಎಡಪಕ್ಷಗಳ ಈ ಆಸೆಯನ್ನು ಹುಸಿಯಾಗಿರಿಸಿವೆ. ಇದಿಷ್ಟು ಸಾಲದೆಂಬಂತೆ ಎರಡೂ ಪಕ್ಷಗಳು ತಮಗೆ ಬಿಟ್ಟುಕೊಡಬೇಕಾದ ಲೋಕಸಭಾ ಸ್ಥಾನಗಳ ಬಗ್ಗೆಯೂ ಪರಸ್ಪರ ವಿರೋಧಾಭಾಸವುಳ್ಳ ಕೇಳಿಕೆಗಳನ್ನು ಮುಂದೊಡ್ಡುತ್ತಿವೆ. ಲೋಕದಳವು ದೇಶಾದ್ಯಂತ 400 ಸ್ಥಾನಗಳನ್ನು ಕೇಳಿದರೆ ಕಾಂಗ್ರೆಸ್ 200 ಸ್ಥಾನಗಳಿಗೆ ಸ್ಪರ್ಧಿಸುವುದಾಗಿ ಹೇಳಿಕೆಯಿತ್ತಿದೆ. ಬೇರೆಬೇರೆ ರಾಜ್ಯಗಳಲ್ಲಿ ಈ ಪಕ್ಷಗಳ ವಕ್ತಾರರು ಮುಂದೊಡ್ಡುತ್ತಿ

[ಕಡೆಯ ಪುಟ ನೋಡಿ]

ಮೈಕೋ ಕಾರ್ಮಿಕರ ಹೋರಾಟಕ್ಕೆ ತ್ರಿಪುರಾ ಮುಖ್ಯಮಂತ್ರಿ ಬೆಂಬಲ

ತ್ರಿಪುರಾ ರಾಜ್ಯದ ಮುಖ್ಯಮಂತ್ರಿ ಕಾಂ. ನೃಪೇನ್ ಚಕ್ರವರ್ತಿಯವರು ಕಾಂ. ಸೂರ್ಯನಾರಾಯಣರಾವ್‌ರವರಿಗೆ ಪತ್ರವೊಂದನ್ನು ಬರೆದು ಮೈಕೋ ಕಾರ್ಮಿಕರ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ. ಪತ್ರದ ಸಾರಾಂಶ ಹೀಗಿದೆ:

ಡಿ. ಓ. ನಂ. ಎಫ್. 3(1)-ಸಿ.ಎಮ್/78

ಮುಖ್ಯಮಂತ್ರಿ
ತ್ರಿಪುರಾ
ಆಗರ್ತಲಾ

ತಾ. 29ನೇ ಅಕ್ಟೋಬರ್, 1979.

ಪ್ರಿಯ ರಾವ್,

ಅಕ್ಟೋಬರ್ 17 ರಂದು ನಿಮ್ಮ ಪತ್ರವನ್ನು ನೋಡಿ ಸಂತೋಷವಾಯಿತು. ಎಡರಂಗ ಸರ್ಕಾರವು ದುಡಿಯುವ ವರ್ಗದ ನ್ಯಾಯವಾದ ಬೇಡಿಕೆಗಳ ಪರವಾಗಿದೆ. ಬಹುರಾಷ್ಟ್ರೀಯ ಬಂಡವಾಳಶಾಹಿಗಳು, ಕಾರ್ಮಿಕರ ನ್ಯಾಯೋಚಿತ ಬೇಡಿಕೆಗಳನ್ನು ಈಡೇರಿಸದಿದ್ದರೆ, ಈ ದೇಶದಲ್ಲಿ ಇರಲು ಅವರಿಗೆ ಯಾವ ಹಕ್ಕೂ ಇಲ್ಲ.

ನಿಮ್ಮ ಸಂಘಟನೆಗೆ ಯಶಸ್ಸನ್ನು ಕೋರುವ ಶುಭಾಶಯಗಳೊಂದಿಗೆ,

ನಿಮ್ಮವ
ಸಹಿ/-
(ನೃಪೇನ್ ಚಕ್ರವರ್ತಿ)

ಶ್ರೀ ಎಸ್. ಸೂರ್ಯನಾರಾಯಣರಾವ್,
ಅಧ್ಯಕ್ಷ, ಮೈಕೋ ಕಾರ್ಮಿಕರ ಸಂಘ
ನಂ. 33, ಬನ್ನೇರುಘಟ್ಟ ರಸ್ತೆ,
ಬೆಂಗಳೂರು.

ಅಕ್ಟೋಬರ್ ಕ್ರಾಂತಿ ದಿನಾಚರಣೆ

ಸಿ. ಐ. ಟಿ. ಯು., ಎ. ಐ. ಟಿ. ಯು. ಸಿ., ಭಾರತ-ರಷ್ಯಾ ಸಾಂಸ್ಕೃತಿಕ ಸಂಘ, ಮತ್ತು ವಿದ್ಯಾರ್ಥಿ ಫೆಡರೇಶನ್ನಿನ ವತಿಯಿಂದ ಬಿಜಾಪುರ ಪುರಸಭೆಯಲ್ಲಿ ರಷ್ಯಾದ-ಅಕ್ಟೋಬರ್ ಕ್ರಾಂತಿ ದಿನಾಚರಣೆಆಚರಿಸಲಾಯಿತು. ಶ್ರೀಮಹಾಲದಾರ ವಕೀಲರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎನ್. ಕೆ. ಉಪಾಧ್ಯಾಯ, ಪ್ರಕಾಶ ಹಟ್ಟಿನಳ್ಳಿ, ಜಾಲವಾದಿ ಮೊದಲಾದವರು ಭಾಷಣ ಮಾಡಿ ರಷ್ಯಾ ಕ್ರಾಂತಿಯ ಮಹತ್ವವನ್ನು ತಿಳಿಸಿ ಹೇಳಿ, ಆ ಕ್ರಾಂತಿಯಿಂದ ಜಗತ್ತಿನ ಜನತೆಯ ಮೇಲಾಗುತ್ತಿರುವ ಪರಿಣಾಮ, ಇನ್ನೂ ಗುಲಾಮಗಿರಿಯಲ್ಲಿದ್ದು, ಸ್ವಾತಂತ್ರ್ಯತೆಗಾಗಿ ಹೋರಾಡುತ್ತಿರುವ ದೇಶಗಳ ಜನತೆಯ ಮೇಲಾಗುತ್ತಿರುವ ಪರಿಣಾಮ ಹಾಗೂ ಭಾರತ ದೇಶಕ್ಕೆ ಸೋವಿಯತ್ ಸರಕಾರ ಮಾಡಿರುವ ಸಹಾಯವನ್ನೆಲ್ಲ ವಿವರಿಸಿ, ನಾವು ಕೂಡ ಅಂಥದ್ದೆ ಸುಲಿಗೆ ರಹಿತ ಸಮಾಜ ಕಟ್ಟಲು ಮುಂದಾಗಬೇಕೆಂದು ಕರೆಯಿತ್ತರು. ವಿದ್ಯಾರ್ಥಿ ಮುಖಂಡರಾದ ಕಾಂ. ಬೆಳ್ಳಬ್ಬಿಯವರು ಅಭಾರ ಮನ್ನಿಸಿದರು. ●

ಡಿ.ಎಫ್.ಎ. ಕಾರ್ಮಿಕರ ಹೋರಾಟ ಮುನ್ನಡೆದಿದೆ

ಉ. ಕ. ಜಿಲ್ಲೆಯ ದಾಂಡೇಲಿಯಲ್ಲಿ, 110ನೇ ದಿನಕ್ಕೆ ಕಾಲಿಟ್ಟಿರುವ "ದಾಂಡೇಲಿ ಫೆರ್ರೋ ಅಲಾಯ್ಸ್" ಕಾರ್ಮಿಕರ ವೀರೋಚಿತ ಹೋರಾಟವನ್ನು ಮುರಿಯಲು ಆಡಳಿತವರ್ಗ ಹೊಸದಾಗಿ ಒಂದು ಕುತಂತ್ರವನ್ನು ರೂಪಿಸಿದೆ.

ದಿನಾಂಕ 29-10-79ರ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ದೈನಿಕದಲ್ಲಿ ಆಡಳಿತವರ್ಗ ಒಂದು ಪ್ರಕಟಣೆಯನ್ನು ಪ್ರಕಟಿಸಿ 'ತಾನು 30-10-79 ರಿಂದ ಲಾಕ್‌ಔಟನ್ನು ತೆಗೆಯುವುದಾಗಿಯೂ ಎಲ್ಲ ಕಾರ್ಮಿಕರು ದಿನಾಂಕ 30-10-79 ರಂದು 8 ಘಂಟೆಗೆ ಕೆಲಸಕ್ಕೆ ಹಾಜರಿರಬೇಕೆಂದು' ಕೇಳಿಕೊಂಡಿತ್ತು.

ಈ ಪ್ರಕಾರ ಎಲ್ಲ ಕಾರ್ಮಿಕರು 30-10-79 ರಂದು ಬೆಳಿಗ್ಗೆ 8 ಘಂಟೆಗೆ ಫ್ಯಾಕ್ಟರಿ ಗೇಟಿನ ಎದುರು ಹಾಜರಾದರು. ಆಡಳಿತವರ್ಗ 'ಎ' ಮತ್ತು 'ಬಿ' ಎಂದು ಎರಡು ಲಿಸ್ಟ್ ಮಾಡಿ ಯೂನಿಯನ್ನಿನ ಸಕ್ರಿಯ ಕಾರ್ಯಕರ್ತರನ್ನು 'ಬಿ' ಲಿಸ್ಟಿನಲ್ಲಿ ಹಾಕಿ, ವಿದ್ಯುಚ್ಛಕ್ತಿಯ ಕೊರತೆಯ ನೆಪದಲ್ಲಿ 'ಎ' ಲೀಸ್ಟಿನವರನ್ನು ಮಾತ್ರ ಸಧ್ಯ ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ತಿಳಿಸಿತು. ಮ್ಯಾನೇಜುಮೆಂಟಿನ ಈ "ಒಡೆದು ಆಳುವ" ನೀತಿಯನ್ನು ಕಾರ್ಮಿಕರು ಉಗ್ರವಾಗಿ ಪ್ರತಿಭಟಿಸಿ ಕೆಲಸಕ್ಕೆ ಹಾಜರಾಗಲಿಲ್ಲ. ಹಸಿವಿನಿಂದ ಕಂಗೆಟ್ಟ ಕಾರ್ಮಿಕರು ಮ್ಯಾನೇಜುಮೆಂಟಿನ ಕಾರ್ಮಿಕವಿರೋಧಿ ನೀತಿಯನ್ನು ಪ್ರತಿಭಟಿಸಿ ಹೋರಾಟವನ್ನು ಮುಂದುವರಿಸುವ ಛಲತೊಟ್ಟಿದ್ದಾರೆ. ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳು ಡಿ. ಎಫ್. ಎ. ಕಾರ್ಮಿಕರ ವೀರೋಚಿತ ಹೋರಾಟಕ್ಕೆ ಸಹಕರಿಸಬೇಕೆಂದು ಡಿ. ಎಫ್. ಎ. ಕಾರ್ಮಿಕಸಂಘ ವಿನಂತಿಸುತ್ತದೆ. ●

ಬಡ ವಿದ್ಯಾರ್ಥಿಗಳಿಗೆ ಬಟ್ಟೆ ಹಂಚಿಕೆ

ತುಮಕೂರು ಜಿಲ್ಲೆ. ತುರುವೇಕೆರೆ ತಾಲ್ಲೂಕು, ದಂಡಿನಶಿವರದಲ್ಲಿ ತಾ. 6.11.79 ರಂದು ಬಡ ವಿದ್ಯಾರ್ಥಿಗಳಿಗೆ 'ರಾಷ್ಟ್ರೀಯ ಜನಸಾಮಾನ್ಯ ಸಂಘ'ದ ವತಿಯಿಂದ ಉಚಿತವಾಗಿ ಬಟ್ಟೆಗಳನ್ನು ಹಂಚಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯದ ದೊಡ್ಡ ನೀರಾವರಿ ಮತ್ತು ಮುಜರಾಯಿ ಮಂತ್ರಿ ಶ್ರೀ ಬಸವಯ್ಯನವರು ವಹಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ಡಿ.ಬಿ. ರಾಜಣ್ಣನವರು ಸಂಘದ ಧ್ಯೇಯ, ಧೋರಣೆಗಳನ್ನು ವಿವರಿಸಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾಂ. ಬಿ.ಡಿ. ರಾಮಯ್ಯನವರು, ದೇಶದಲ್ಲಿ ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುವ ಅಗತ್ಯವನ್ನು ತಿಳಿಸಿದರಲ್ಲದೆ, ದೇಶ ಬಲಿಷ್ಠವಾಗಲು ರೈತ, ಕಾರ್ಮಿಕರ ಸಂಘಟನೆ ಶಕ್ತಿಯುತವಾಗಿ ಕಟ್ಟಲು ಕರೆಯಿತ್ತರು.

ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ತುರುವೇಕೆರೆ ಶಾಸಕರಾದ ಶ್ರೀ ರಾಮಕೃಷ್ಣಯ್ಯನವರು ಹಾಗು ಮಾಜಿ ಕಂದಾಯ ಸಚಿವ ಶ್ರೀಹುಚ್ಚಮಾಸ್ತಿಗೌಡರು ಬಂದಿದ್ದರು. ತಾಲ್ಲೂಕ್ ಬೋರ್ಡ್ ಸದಸ್ಯ ಶ್ರೀ ಎನ್. ಶಿವಣ್ಣನವರು ಮಾತನಾಡುತ್ತಾ, ಕೆಲವೇ ದಿನಗಳ ಹಿಂದೆ ಸರ್ವಾಧಿಕಾರಿ ಶಕ್ತಿಗಳನ್ನು ವಿರೋಧಿಸಿದವರು, ಈಗ ಬೆಂಬಲಿಸಲು ಹೊರಟಿದ್ದಾರೆ, ಈ ಬಗ್ಗೆ ಜನತೆ ಎಚ್ಚರದಿಂದ ಇರಬೇಕೆಂದು ಕರೆಯಿತ್ತರು.

ಸಂಘದ ಕಾರ್ಯದರ್ಶಿ ಡಿ. ಎಸ್. ನಂಜುಂಡಯ್ಯನವರ ವಂದನಾರ್ಪಣೆಯೊಂದಿಗೆ ಸಭೆ ಮುಗಿಯಿತು. ●

ಮೈಕೋ ಕಾರ್ಮಿಕ ಸಂಘದ ಪದಾಧಿಕಾರಿಗಳ ಮೇಲೆ ಪುನಃ ಹಲ್ಲೆ

ಪೋಲೀಸ್ ಅಧಿಕಾರಿಗಳಿಗೆ ಕಾಂ. ಸೂರ್ಯನಾರಾಯಣ್ ಪತ್ರ

ಮೈಕೋ ಆಡಳಿತ ವರ್ಗದ ಗೂಂಡಾಗಳು ಕಾರ್ಮಿಕ ಸಂಘದ ನಿಷ್ಠಾವಂತ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿರುವುದನ್ನು ಅನೇಕ ಬಾರಿ ಗಮನಕ್ಕೆ ತಂದಿದ್ದರೂ ಪೋಲೀಸ್ ಅಧಿಕಾರಿಗಳು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲದಿರುವುದು ವಿಷಾದಕರ ತಾ. 12-11-79 ರಂದು ಆಡಳಿತ ವರ್ಗದ ಹಸ್ತಕ ಶ್ರೀಜವರಯ್ಯ ಮತ್ತು ಲಕ್ಷ್ಮಯ್ಯ ಮತ್ತವರ ಗೂಂಡಾಗಳು ನಮ್ಮ ಸಂಘದ ಸಹಾಯಕ ಕಾರ್ಯದರ್ಶಿ ಶ್ರೀ ಫಿಲಿಪ್ಸ್ ನರೋನಾ ಮತ್ತು ಇತರೆ ಆರು ಮಂದಿಯ ಮೇಲೆ ಹಲ್ಲೆ ಮಾಡಿರುವುದಲ್ಲದೆ, ಅದೇ ರೌಡಿಗಳು ತಾ. 14-11-79 ರಂದು ಶ್ರೀ ಶಾಮಣ್ಣ ಎಂಬ ಕಾರ್ಮಿಕ ಹಾಗೂ ಕ್ರೀಡಾಪಟುವನ್ನು ಸೈಕಲ್ ಚೈನುಗಳಿಂದ ದೇಹದ ಮೇಲೆಲ್ಲಾ ಥಳಿಸಿದ್ದಾರೆ.

ತಾ. 14-11-79 ರಂದು ರಾತ್ರಿ 12-30ಕ್ಕೆ ಶ್ರೀ ಬನ್ನೇರುಘಟ್ಟ ರಾಮು, ಮೀಸೆಮುನಿಯಪ್ಪ ಮತ್ತಿತರ ಗೂಂಡಾಗಳು (ಜವರಯ್ಯ-ಲಕ್ಷ್ಮಯ್ಯನವರ ಗುಂಪಿಗೆ ಸೇರಿದವರು) ಶ್ರೀಮರಿಯಪ್ಪ ಎಂಬುವರ ಹತ್ಯೆಗೆ ಲಕ್ಕಸಂದ್ರದ ಬಳಿ ಯತ್ನಿಸಿದರು, ಅಲ್ಲದೆ ಇತರ ಮೂವರು ಕಾರ್ಮಿಕರನ್ನೂ ಥಳಿಸಿದ್ದಾರೆ. ಇದಕ್ಕಾಗಿ ಪಷ್ಕರ್ಮಿಗಳು, ಸೈಕಲ್ ಚೈನು, ಚಾಕು, ಹರಿತವಾದ ಕತ್ತಿ, ಮತ್ತು ಎರಡು ಕಾರುಗಳನ್ನು ಉಪಯೋಗಿಸಿದ್ದಾರೆ.

ಮೇಲ್ಕಾಣಿಸಿದ ರೌಡಿ ಗುಂಪು ಮುಷ್ಕರ ನಡೆಸುತ್ತಿರುವ ಕಾರ್ಮಿಕರ ಜೀವಕ್ಕೆ ಗಂಡಾಂತರಕಾರಿಯಾಗಿದ್ದಾರೆ. ಈ ಬಗ್ಗೆ ನಗರದ ವಿವಿಧ ಪೋಲೀಸ್ ಠಾಣೆಗಳಲ್ಲಿ ಅನೇಕ ದೂರುಗಳು ದಾಖಲೆಯಾಗಿವೆ. ಮುಷ್ಕರ ಮುರಿಯುವುದೇ ಗೂಂಡಾಗಳ ಉದ್ದೇಶ ಎಂಬುದು ಇದರಿಂದ ಸ್ಪಷ್ಟ.

ವಿಷಯವನ್ನು ರಾಜ್ಯದ ಮುಖ್ಯಮಂತ್ರಿಗಳು, ಮುಖ್ಯಕಾರ್ಯದರ್ಶಿಗಳು ಗೃಹಕಮೀಷನರ್ ಮುಂತಾದವರ ಗಮನಕ್ಕೆ ತರಲಾಗಿದೆ. ಮುಷ್ಕರ ನಿರತ ಕಾರ್ಮಿಕರಿಗೆ ಸೂಕ್ತ ರಕ್ಷಣೆಯ ಭರವಸೆ ಪಡೆಯಲಾಗಿದೆ. ನೀವು ಕೂಡಾ ಹಿಂದೆ ಈ ಬಗ್ಗೆ ಭರವಸೆ ನೀಡಿದ್ದರೂ, ರೌಡಿಗಳು ಕಾನೂನಿನ ಪರಿವೆಯೇ ಇಲ್ಲದಂತೆ ವರ್ತಿಸುತ್ತಿರುವುದು ವಿಷಾದನೀಯ.

ನೀವು ಈ ಬಗ್ಗೆ ಸೆಕ್ಷನ್ 151 CRPC ಮತ್ತು ಸೆಕ್ಷನ್ 107ರ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ಕಾರ್ಮಿಕರು ತಮ್ಮ ಪ್ರಾಣ ರಕ್ಷಣೆಗೆ ಪೋಲೀಸರಲ್ಲಿ ಭರವಸೆಯಿಡುವಂತೆ ಮಾಡುತ್ತೀರೆಂದು ನಂಬುತ್ತೇವೆ.

* * *

ಮೇಲ್ಕಾಣಿಸಿದ ವಿಷಯವನ್ನು ಪತ್ರರೂಪದಲ್ಲಿ ಕಾರ್ಮಿಕ ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್‌ರವರು ಪೋಲೀಸ್ ಕಮೀಷನರ್‌ರವರಿಗೆ ತಾ. 16-11-79 ರಂದು ತಿಳಿಸಿದ್ದಾರೆ. ○

ಬಂಗಾರುಪೇಟೆ ತಾಲ್ಲೂಕು ರೈತ ಕಾರ್ಯಕರ್ತರ ಸಭೆ

11-11-79 ಭಾನುವಾರ ಬಂಗಾರಪೇಟೆ ತಾಲ್ಲೂಕ್ ರೈತಕಾರ್ಯಕರ್ತರ ಸಭೆ ಕಾಂ. ಆರ್. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಪ್ರವಾಸಿ ಮಂದಿರದಲ್ಲಿ ನಡೆಯಿತು. ತಾಲ್ಲೂಕಿನ ಕಾರ್ಯಕರ್ತರು ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ದೀರ್ಘ ಚರ್ಚೆ ನಡೆಯಿತು. ತಮ್ಮ ಬೇಡಿಕೆಗಳ ಬಗ್ಗೆ ಕಾರ್ಯಕ್ರಮ ರೂಪಿಸಲು ಮತ್ತೆ 17-11-79 ತಾಲ್ಲೂಕಿನಾದ್ಯಂತ ರೈತ ಕಾರ್ಮಿಕರ ಸಭೆಯನ್ನು ಕರೆಯಬೇಕೆಂದು ತೀರ್ಮಾನಿಸಲಾಯಿತು. ಕೋಲಾರ ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿಯವರು ಭೂಗ್ರಹಣ ಚಳುವಳಿ ಬಗ್ಗೆ ಮಾತನಾಡಿದರು. ಬೆಂಗಳೂರು ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಪಿ. ಜಗನ್ನಾಥ್‌ರವರು ರೈತಸಂಘದ ಅವಶ್ಯಕತೆ ಹಾಗೂ ಸಂಘಟನೆ ಬಗ್ಗೆ ಮಾತನಾಡಿದರು. ಸಭೆಯಲ್ಲಿ ಕೋಲಾರ ತಾಲ್ಲೂಕು ರೈತಸಂಘದ ಅಧ್ಯಕ್ಷರಾದ ಬಿ. ಕೃಷ್ಣಪ್ಪ ಮತ್ತು ವಕೀಲರಾದ ವೆಂಕಟೇಶಗೌಡರು ಸಹಾ ಭಾಗವಹಿಸಿದ್ದರು. 8 ಜನ ವ್ಯವಸ್ಥಾಪಕರನ್ನು ನೇಮಿಸಲಾಯಿತು. 1. ವಿ. ಬೇಟರಾಯಪ್ಪ 2. ಮರೇಗೌಡ 3. ಜಿ. ನಾರಾಯಣ್ 4. ಸಿ. ಆರ್. ಮುನಿಸ್ವಾಮಿ 5. ಎಂ ಎನ್. ಗೋಪಾಲರೆಡ್ಡಿ 6. ಸಿ. ಎನ್. ಶಿವಣ್ಣ 7. ಗುರಪ್ಪ (ಮುನಿಸ್ವಾಮಿಬೋವಿ) 8. ಆರ್. ತಿಪ್ಪಣ್ಣ. ●

ಭೂಹೀನ ಹರಿಜನರ ಮೇಲೆ ಹಲ್ಲೆ

ಹಾಗಲ್ವಾಡಿ ಹೋಬಳಿಗಳಿಗೆ ಕೆರೆ ಬಳಿ ಹೊಸದಾಗಿ ರಿಲೀಸ್ ಆಗಿರುವ ಬಂಜರು, ಉತ್ತಮ ತರಿಭೂಮಿಯಾಗುವುದನ್ನು ಜುಂಜಪ್ಪನಹಟ್ಟಿ 8 ಭೂಹೀನ ಹರಿಜನರು ಉತ್ತು ಜೋಳಹಾಕಿದ್ದನ್ನು ಹಾಗಲ್ವಾಡಿಯ ಕೆಲವು ಭೂಮಿಯಿರುವ ಸವರ್ಣೀಯರು ಪುನಃ ಉತ್ತು ಹರಿಜನರು ಹಾಕಿದ್ದ ಗುಡಿಸಲುಗಳನ್ನೆಲ್ಲಾ ಕಿತ್ತು ಹರಿಜನರನ್ನು ಹೊಡೆದು ಪ್ರಾಣಭಯ ಹುಟ್ಟಿಸುತ್ತಿದ್ದಾರೆ. ಈ ಬಗ್ಗೆ ಸ್ಥಳೀಯಪೋಲೀಸರಿಗೂ ದೂರು ಕೊಟ್ಟು, ರಾಜ್ಯ ಕಂದಾಯ ಸಚಿವರಿಗೆ ಜಮೀನ್ ಅವರಿಗೆ ಮಂಜೂರ್ ಮಾಡಬೇಕೆಂದು ಮನವಿಯನ್ನು ಸಲ್ಲಿಸಿ ಈ ಪುಂಡಾಟಿಕೆ ನಿಲ್ಲಿಸಿ ರಕ್ಷಣೆಕೊಡಲು IGPರವರನ್ನೂ ಪ್ರಾರ್ಥಿಸಲಾಯಿತು. ಈ ನಿಯೋಗದಲ್ಲಿ ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಹೆಚ್. ಸಿ. ಚನ್ನಪ್ಪ ಹಾಗಲ್ವಾಡಿ ಪಂಚಾಯ್ತಿ ಮೆಂಬರ್ ಬೋರಲಿಂಗಯ್ಯ, ಹರಿಜನ ಮುಖಂಡ ಓಬಳಯ್ಯನವರು ಇದ್ದರು. ಈ ಬಗ್ಗೆ ಜಿಲ್ಲಾ ಡೆಪ್ಯೂಟಿ ಕಮೀಷನರ್‌ರವರಿಗೂ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳಿಗೂ ಮನವಿ ಸಲ್ಲಿಸಿದೆ. ●

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯದ ಮಹತ್ವ

ಎಂ. ಬಸವಪುನ್ನಯ್ಯ

ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ನಡೆದ ಹೋರಾಟದಲ್ಲಿ ಕಮ್ಯುನಿಸ್ಟರು, ಸೋಷಲಿಸ್ಟರು. ಜವಾಹರಲಾಲ್, ಸುಭಾಸ್‌ಚಂದ್ರ ಬೋಸ್ ಮುಂತಾದವರ ನೇತೃತ್ವದಲ್ಲಿದ್ದ ಶಕ್ತಿಗಳು ಎಡಪಂಥೀಯ ಶಕ್ತಿಗಳೆಂದು ಪರಿಗಣಿಸಲಾಗುತ್ತಿತ್ತು. ಕಾಂಗ್ರೆಸ್ ಪಕ್ಷದ ಪರಂಪರೆ, ನಾಯಕತ್ವದೊಂದಿಗೆ ಇತರ ಪಕ್ಷಗಳನ್ನು ಹೋಲಿಸುವಾಗ, ದೇಶದಲ್ಲಿ ಮೂಲಭೂತ ಬದಲಾವಣೆಯನ್ನು ಬಯಸುವ ಎಲ್ಲಾ ಶಕ್ತಿಗಳನ್ನು "ಎಡಪಂಥೀಯ"ರೆಂದು ತಿಳಿಯಲಾಗುತ್ತಿತ್ತು. ಆದರೆ ಇಂದು ಪರಿಸ್ಥಿತಿ ವ್ಯತಿರಿಕ್ತವಾಗಿದೆ. ಸ್ವಾತಂತ್ರ್ಯಾನಂತರ, ಪ್ರಜಾಪ್ರಭುತ್ವವನ್ನು ದೇಶದಲ್ಲಿ ಸ್ಥಿರಗೊಳಿಸುವುದು ಮೊದಲ ಗುರಿಯಾಯಿತು. ದೇಶದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಿರಗೊಳಿಸುವುದರ ಅರ್ಥ, ಸಾಮ್ರಾಜ್ಯಶಾಹಿ, ಪಾಳೆಯಗಾರಿ ಹಾಗೂ ಗುತ್ತೇದಾರಿ ಬಂಡವಾಳಶಾಹಿ ಪದ್ಧತಿಯನ್ನು ಅಳಿಸಿ ಹಾಕುವುದು. ಪ್ರಜಾಪ್ರಭುತ್ವವಾದಿಗಳು ಈ ಮೂರು ಶಕ್ತಿಗಳ ವಿರುದ್ಧ ಹೋರಾಟ ಮಾಡುವುದು ಮಾತ್ರ ತಮ್ಮ ಆದರ್ಶವೆಂದು ಭಾವಿಸಿದ್ದರು. ಆದರೆ, ಕಮ್ಯುನಿಸ್ಟರು ಹಾಗೂ ಸೋಷಲಿಸ್ಟರು, ಈ ಚೌಕಟ್ಟನ್ನು ದಾಟಿ ಭಾರತದಲ್ಲಿ ಸಮಾಜವಾದೀ ಸಮಾಜವನ್ನು ಸ್ಥಾಪಿಸುವುದೇ ತಮ್ಮ ಗುರಿಯೆಂದು ಘೋಷಿಸಿರುವರು. ಸೋಷಲಿಸ್ಟ್ ಪಕ್ಷ, ಪಿ. ಎಸ್. ಪಿ., ಆರ್. ಎಸ್. ಪಿ., ಫಾರ್ವರ್ಡ್ ಬ್ಲಾಕ್, ಪಿ. ಡಬ್ಲ್ಯು. ಪಿ., ಸಿ. ಪಿ. ಐ., ಸಿ. ಪಿ. ಐ. (ಎಂ) ಪಕ್ಷಗಳು ಈ ಧೋರಣೆಯುಳ್ಳವರು. (ಅಧಿಕಾರಶಾಹಿಯನ್ನು ವಿರೋಧ ಮಾಡುವುದರಿಂದ ಮಾತ್ರ ಒಬ್ಬರನ್ನು ಎಡಪಂಥವಾದಿ ಅಥವಾ ಪ್ರಜಾಪ್ರಭುತ್ವವಾದಿ ಎಂದು ಕರೆಯುವುದು ತಪ್ಪು).

ಈ ಹಿನ್ನೆಲೆಯಲ್ಲಿ ಬೂರ್ಜ್ವಾಗಳ ಹಾಗೂ ಕಾರ್ಮಿಕ ವರ್ಗದ ಪಾತ್ರವನ್ನು ವಿಶ್ಲೇಷಣೆ ಮಾಡಬೇಕಾದದ್ದು ಅಗತ್ಯ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಆಡಳಿತ ವರ್ಗದ ಅಂದರೆ ಕಾಂಗ್ರೆಸ್ಸಿನ ಹಾಗೂ ಕಮ್ಯುನಿಸ್ಟ್ ಪಕ್ಷದ ಪಾತ್ರವನ್ನು ವಿಮರ್ಶಿಸುವುದು ಅಗತ್ಯ. 1952ರ ಚುನಾವಣೆಯಿಂದಲೇ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಒಡೆಯಲು ಕಾಂಗ್ರೆಸ್ ಪಕ್ಷ ಎಲ್ಲಾ ಪ್ರಯತ್ನಗಳನ್ನು ಮಾಡಿತು. ಕಮ್ಯುನಿಸ್ಟ್ ಚಳುವಳಿಗೆ ತಾವು ವಿರೋಧವೆಂದು ಸಾರಿದರು. ಮೊದಲ ಹೆಜ್ಜೆಯಾಗಿ, ಮೊದಲನೇ ಸಾರ್ವತ್ರಿಕ ಚುನಾವಣೆಯಲ್ಲಿ ಔದ್ಯೋಗಿಕರಣಕ್ಕೆ ವಿರುದ್ಧವಾಗಿರುವ ಪಕ್ಷವೆಂದು ಸೋಷಲಿಸ್ಟ್ ಪಕ್ಷವನ್ನು ಕಮ್ಯುನಿಸ್ಟರ ವಿರುದ್ಧ ಎತ್ತಿ ಹಿಡಿದರು. ರಾಜ್ಯ ವಿಧಾನ ಸಭೆಗಳಲ್ಲಿ ಸುಮಾರು 3000 ಸ್ಥಾನಗಳಲ್ಲಿ, ಹಾಗೂ ಲೋಕಸಭೆಯ 300 ಸ್ಥಾನಗಳಿಗೂ ಸ್ಪರ್ಧಿಸಲು ಅವರಿಗೆ ಪ್ರೋತ್ಸಾಹ ಕೊಟ್ಟರು. ಆದರೆ, ಮೊದಲನೇ ಮಹಾ ಚುನಾವಣೆಯ ಫಲಿತಾಂಶಗಳು ಪ್ರಕಟವಾಗಿ, ಕಮ್ಯುನಿಸ್ಟ್ ಪಕ್ಷ ಪ್ರಧಾನ ವಿರೋಧ ಪಕ್ಷವಾಗಿ ಆರಿಸಿ ಬಂತು.

ಸೋಷಲಿಸ್ಟ್ ಪಕ್ಷವನ್ನು ಕಮ್ಯುನಿಸ್ಟರಿಗೆದುರಾಗಿ ಉಪಯೋಗಿಸುವುದು ಪ್ರಯೋಜನವಿಲ್ಲದ್ದೆಂದು ತಿಳಿದ ಬೂರ್ಜ್ವಾಗಳ ಮುಖಂಡರು, ಕಾಂಗ್ರೆಸ್ ಪಕ್ಷವೂ ಎಡಪಂಥೀಯ ಘೋಷಣೆಯನ್ನು ಅಂಗೀಕರಿಸುವಂತೆ ಮಾಡಿದರು. 1954-55 ರಲ್ಲಿ ಈ ಕಾರಣಕ್ಕಾಗಿಯೇ ಕಾಂಗ್ರೆಸ್ ಪಕ್ಷ ಆವಡಿ ಅಧಿವೇಶನದಲ್ಲಿ ಸಮಾಜವಾದೀ ಮಾದರಿ ಸರಕಾರವನ್ನು ತರುವುದಾಗಿ ಘೋಷಿಸಿತು. ಅಂತರ್‌ರಾಷ್ಟ್ರೀಯ ರಂಗದಲ್ಲಿ, 'ಹಿಂದೀ-ಚೀನೀ ಭಾಯಿ ಭಾಯಿ' ಎಂದೂ, 'ಭಾರತ-ರಷ್ಯಾ ಭಾಯಿ ಭಾಯಿ' ಎಂದೂ ಹೇಳಲು ಆರಂಭಿಸಿದರು. ಇಷ್ಟೆಲ್ಲಾ ನಾಟಕ ಆಡಿದರೂ, 1957ರ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತೆ ಪ್ರಮುಖ ವಿರೋಧಪಕ್ಷವಾಯಿತು, ಕೇರಳದಲ್ಲಿ ಸರಕಾರವನ್ನೇ ರಚಿಸಿತು. ಕಮ್ಯುನಿಸ್ಟ್ ಚಳುವಳಿಗೆ ಎದುರಾಗಿ, ಬೂರ್ಜ್ವಾವರ್ಗ ಬೆಳೆಸಿಕೊಂಡು ಬಂದ ಬೇರೆ ಯಾವ ಎಡ ಪಕ್ಷವೂ ಯಶಸ್ವಿಯಾಗಿ ಬೆಳೆಯಲಿಲ್ಲ. ಈ ಸನ್ನಿವೇಶದಲ್ಲಿ, ಆಡಳಿತವರ್ಗ ಕಮ್ಯುನಿಸ್ಟರ ನೇತೃತ್ವದ ಎಡಪಂಥೀಯ ಚಳುವಳಿಗೆ ಎದುರಾಗಿ ಉಳಿದ ಎಲ್ಲಾ ಶಕ್ತಿಗಳನ್ನು ಒಂದುಗೂಡಿಸಿತು ಒಂದು ವಿಷಾದನೀಯ ಸಂಗತಿಯೆಂದರೆ, ಕೆಲವು ಎಡಪಂಥೀಯ ಪಕ್ಷಗಳು ಈ ಬಲೆಯಲ್ಲಿ ಬಿದ್ದದ್ದು. ಇದರಿಂದ ಎಡಪಂಥೀಯ ಚಳುವಳಿ ಶಿಥಿಲವಾಯಿತು. ಕೇರಳದ "ವಿಮೋಚನಾ ಹೋರಾಟ"ಕ್ಕೆ ಇದೇ ನಾಂದಿಯಾಯಿತು.

1962-67 ರಲ್ಲಿ, ಆಳುವವರ್ಗಕ್ಕೆ ದುರಾಗಿ ದುಡಿಯುವ ಜನತೆಯ ಪ್ರಬಲವಾದ ಹೋರಾಟಗಳು ನಡೆದವು. ಆಳುವವರ್ಗಗಳು ಎಡಪಂಥೀಯ ಚಳುವಳಿಯನ್ನು ಒಡೆಯಲು ಪ್ರಯತ್ನಿಸಿದರು. 1967ರ ಚುನಾವಣೆಗಳಲ್ಲಿ ಆ ಪ್ರಯತ್ನಗಳೆಲ್ಲಾ ವಿಫಲವಾದುವು. ಮಾತ್ರವಲ್ಲ, ಆಡಳಿತ ಪಕ್ಷವೇ ಒಡೆದು ಎರಡು ಹೋಳಾಯಿತು. ಎಂಟು ರಾಜ್ಯಗಳಲ್ಲಿ ಪ್ರಪ್ರಥಮವಾಗಿ ಕಾಂಗ್ರೆಸ್ಸೇತರ ಸರಕಾರಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ, ಆರು ರಾಜ್ಯಗಳಲ್ಲಿ ಸಂಯುಕ್ತರಂಗ ಸರಕಾರಗಳೂ, ಎರಡು ರಾಜ್ಯಗಳಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ ಎಡರಂಗದ ಸರಕಾರಗಳೂ ರಚನೆಯಾದವು. ಬೂರ್ಜ್ವಾ ವರ್ಗ ತನ್ನ ಹಳೆಯ ಕೆಲಸವಾದ, ಎಡರಂಗದ ಸರಕಾರಗಳನ್ನು ಉರುಳಿಸುವ ಕೆಲಸವನ್ನು ಪುನಃ ಪ್ರಾರಂಭಿಸಿತು. ಈ ಮಧ್ಯೆ ತಾವು ಸಾಮ್ರಾಜ್ಯಶಾಹಿ ಹಾಗೂ ಪಾಳೆಯಗಾರಿ ಪದ್ಧತಿಯ ವಿರುದ್ಧವೆಂಬ ಭ್ರಮೆಯನ್ನು ಬೆಳೆಸಿದರು. ಅದರಲ್ಲೂ ಗರೀಬಿ ಹಟಾವೋ ಘೋಷಣೆ ವಹಿಸಿದ ಪಾತ್ರ ಬಹು ದೊಡ್ಡದು.

1970-71ರಿಂದ ಎಡಪಂಥದ ಒಡಕು ಆರಂಭವಾಯಿತು. ಸೋಷಲಿಸ್ಟರು ಜಯಪ್ರಕಾಶರ ಕಡೆಗೂ, ಸಿ. ಪಿ. ಐ. ಇಂದಿರಾಗಾಂಧಿಯ ಕಡೆಗೂ ನೋಡಲು ಪ್ರಾರಂಭಿಸಿದಾಗ ಒಡಕು ಸ್ಪಷ್ಟವಾಯಿತು. ಇದಕ್ಕಾಗಿ ಅವರು ಅತಿದೊಡ್ಡ ಬೆಲೆಯನ್ನು ತೆರಬೇಕಾಯಿತು. ಸೋಸಲಿಸ್ಟ್ ಪಕ್ಷ ಸಂಪೂರ್ಣವಾಗಿ ಹೆಸರಿಲ್ಲದಂತಾಯಿತು. ಸಿ. ಪಿ. ಐ., ಮಾರ್ಕ್ಸಿಸ್ಟ್ ವಿರೋಧಿ ಪಕ್ಷಗಳ ಜೊತೆ ಸೇರಿಕೊಂಡಿತು. ಸಿ. ಪಿ. ಐ. (ಎಂ) ಇತರ ಎಡಪಕ್ಷಗಳಿಂದ ಪೂರ್ಣವಾಗಿ ಪ್ರತ್ಯೇಕವಾಯಿತು. 1977 ರಲ್ಲಿ ಘಟನೆಗಳು ಬೇರೊಂದು ತಿರುವನ್ನು ಪಡೆದುಕೊಂಡವು. ಸಿ. ಪಿ. ಐ ಯನ್ನು ಬಿಟ್ಟು ಇತರ ಎಡಪಂಥೀಯ ಪಕ್ಷಗಳು ಸರ್ವಾಧಿಕಾರಿಶಾಹಿಯ ವಿರುದ್ಧ ಒಂದಾಗಿ, ಜನತಾ ಪಕ್ಷದೊಂದಿಗೆ ಸಹಕರಿಸಿದರು.

ಕಳೆದ 30 ತಿಂಗಳಲ್ಲಿ ಮತ್ತೊಂದು ಹೋರಾಟವನ್ನು ನಾವು ಕಾಣುತ್ತಿದ್ದೇವೆ. ಈ ಬೆಳವಣಿಗೆಗಳ ಬಗ್ಗೆ ನಮಗೆ ಚೆನ್ನಾಗಿ ಗೊತ್ತಿದೆ. ಹೊಸ ಪರಿಸ್ಥಿತಿ, ಎರಡು ರೀತಿಯ ಧೃವೀಕರಣವನ್ನು ಸೃಷ್ಟಿಸಿದೆ. 1. ಕಾಂಗ್ರೆಸ್ ಹಾಗೂ ಜನತಾಪಕ್ಷವನ್ನು ಸೋಲಿಸಿ ಎಡಪಂಥೀಯ ಪಕ್ಷಗಳು ಪ್ರಮುಖ ಪಕ್ಷಗಳಾಗಿ ಪ. ಬಂಗಾಳ ಮತ್ತು ತ್ರಿಪುರಾದಲ್ಲಿ ಬೆಳೆದು ಬಂದದ್ದು; 2. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಪ್ರತ್ಯೇಕಗೊಳಿಸಲು, ಉಳಿದ ಎಲ್ಲಾ ಶಕ್ತಿಗಳನ್ನು ಒಂದುಗೂಡಿಸುವ ಕೆಲಸಕ್ಕೆ ಕೇರಳ ರಾಜ್ಯದ ಬೆಳವಣಿಗೆಗಳು ಅವಕಾಶಕೊಟ್ಟಿರುವುದು. ಈ ಹಿನ್ನೆಲೆಯಲ್ಲಿ ದೇಶದ ಸಮಸ್ಯೆಗಳ ಬಗ್ಗೆ ಕಮ್ಯುನಿಸ್ಟ್ ಚಳುವಳಿಯಲ್ಲಿ ಉಂಟಾದ ಭಿನ್ನಾಭಿಪ್ರಾಯಗಳು ಕೂಡಾ ಬದಲಾಗಿವೆ. ಪ್ರಶ್ನೆಯೆಂದರೆ, ಕಮ್ಯುನಿಸ್ಟ್ ಪಕ್ಷವೆಂದು ಸ್ವಯಂ ಹೇಳಿಕೊಳ್ಳುವ ಒಂದು ಪಕ್ಷ ಇನ್ನೊಂದು ಎಡ ಪಕ್ಷವನ್ನು ನಾಶ ಮಾಡುವುದಕ್ಕೆ ಆಡಳಿತ ಬೂರ್ಜ್ವಾ ಪಕ್ಷದೊಂದಿಗೆ ಸೇರುವುದು ಸರಿಯೇ ? ನನ್ನ ಪಕ್ಷ ಹಿಂದೆಂದೂ ಅಂತಹ ತಪ್ಪು ಮಾಡಿರುವುದಾಗಿ ತೋರುವುದಿಲ್ಲ. ಎರಡೂ ಕಮ್ಯುನಿಸ್ಟ್ ಪಕ್ಷಗಳಲ್ಲಿ ತಪ್ಪಿದ್ದ ಪಕ್ಷದಲ್ಲಿ ಅದನ್ನು ಸರಿಪಡಿಸಬೇಕು. ಎಡಪಕ್ಷಗಳ ಐಕ್ಯತೆಯನ್ನು ಗೌರವಿಸುವುದಾದರೆ, ಯಾವ ಕಾರಣದಿಂದಲೂ ಒಂದು ಕಮ್ಯುನಿಸ್ಟ್ ಪಕ್ಷ ಇನ್ನೊಂದು ಕಮ್ಯುನಿಸ್ಟ್ ಪಕ್ಷಕ್ಕೆ ವಿರುದ್ಧವಾಗಿ ಬೂರ್ಜ್ವಾ ವರ್ಗದೊಂದಿಗಾಗಲೀ, ಪಕ್ಷದ ಜೊತೆಯಲ್ಲಾಗಲೀ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲವೆಂದು ಎರಡೂ ಕಮ್ಯುನಿಸ್ಟ್ ಪಕ್ಷಗಳು ವಿಶ್ವಾಸ ವ್ಯಕ್ತಪಡಿಸುವ ಸಮಯ ಬಂದಿದೆಯೆಂದು ನನಗೆ ತೋರುತ್ತದೆ ಇಷ್ಟನ್ನೂ ಸಾಧಿಸುವುದಾದರೆ, ಎಲ್ಲಾ ಎಡಪಂಥೀಯ, ಪ್ರಜಾಪ್ರಭುತ್ವ ಶಕ್ತಿಗಳನ್ನು ಒಟ್ಟುಗೂಡಿಸಲು ಸಾಧ್ಯವೆಂಬುದು ನನ್ನ ನಂಬಿಕೆ ಕಾರಣ, ಎಡಪಂಥೀಯ-ಪ್ರಜಾಪ್ರಭುತ್ವ ಚಳುವಳಿಯ ಕೇಂದ್ರ ಬಿಂದು ಕಮ್ಯುನಿಸ್ಟರು. ಸಿ. ಪಿ. ಐ. (ಎಂ) ಹಾಗೂ ಬೂರ್ಜ್ವಾ ಪಕ್ಷಗಳ ಬಗ್ಗೆ ತನ್ನ ಧೋರಣೆಯನ್ನು ಸಿ. ಪಿ. ಐ. ಬದಲಾಯಿಸಿದ್ದು ಸ್ವಾಗತಾರ್ಹ. ಅವರ ಈ ಧೋರಣೆ ಎಡಪಕ್ಷಗಳ ಐಕ್ಯಕ್ಕೆ ಸಹಕಾರಿ. ನಮ್ಮ ಪಕ್ಷದೊಂದಿಗೆ ಒಂದು ಒಪ್ಪಂದಕ್ಕೆ ಬಂದದ್ದು ಒಳ್ಳೆಯ ಕಾರ್ಯ. ಕಮ್ಯುನಿಸ್ಟ್ ಪಕ್ಷಗಳು ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದ್ದರೆ, ಅಖಿಲ ಭಾರತ ಮಟ್ಟದಲ್ಲಿ ಒಂದು ಎಡಪಂಥೀಯ ಚಳುವಳಿಯನ್ನು ಕಟ್ಟಲು ಸಾಧ್ಯವಾಗುವುದಿಲ್ಲ. ಸಿ. ಪಿ ಐ ನಲ್ಲಿ ಉಂಟಾದ ಈ ಬದಲಾವಣೆ ಬೂರ್ಜ್ವಾ ವರ್ಗಕ್ಕೆ ಅತ್ಯಂತ ಕ್ರೋಧವನ್ನುಂಟುಮಾಡಿದೆ. ಸ್ವಾಗತಾರ್ಹವಾದ ಈ ಸಂಭವಗಳನ್ನು ತಡೆಗಟ್ಟಲು ಆಗಲೆ ಒಳಸಂಚುಗಳನ್ನು ನಡೆಸುತ್ತಿದ್ದಾರೆ. ಆದರೆ. ನಿಜ ಹೇಳುವುದಾದರೆ ಎಡಪಂಥವನ್ನು ಒಡೆಯಲು ಗುತ್ತೇದಾರಿ ಬಂಡವಾಳಗಾರರು ನಡೆಸುವ ಪಿತೂರಿಯ ಫಲವಾಗಿ ಒಂದು ಕಡೆ ಬೂರ್ಜ್ವಾ ವರ್ಗವೇ ಒಡೆಯಿತು.

ಈ ಪರಿಸ್ಥಿತಿಯಲ್ಲಿ, ಒಂದು ಶುಭ ಚಿಹ್ನೆ ಏನೆಂದರೆ ಕಳೆದ 15 ವರ್ಷಗಳ ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಂಡೇ ಎಡಪಂಥೀಯ ಐಕ್ಯತೆಯನ್ನು ಕಟ್ಟುವುದಕ್ಕಾಗಿ ಹಾಗೂ ಜನತೆಯ ಮುಂದೆ ನಿಜವಾದ ಬದಲಿ ಶಕ್ತಿಯಾಗಿ ಬೆಳೆದು ಬರಲು ಎರಡೂ ಕಮ್ಯುನಿಸ್ಟ್ ಪಕ್ಷಗಳು ಶ್ರಮಿಸುತ್ತಿರುವುದು. ಜುಲೈ ತಿಂಗಳ ಬಿಕ್ಕಟ್ಟಿನ ನಂತರ ಉಂಟಾದ ರಾಜಕೀಯ ಬೆಳವಣಿಗೆಗಳು ವಾಮಪಕ್ಷಗಳು ಹಾಗೂ ಪ್ರಜಾಪ್ರಭುತ್ವ ಶಕ್ತಿಗಳನ್ನು ಹತ್ತಿರ ಬರುವಂತೆ ಮಾಡಿವೆ. ನಮ್ಮ ಧೃಡವಾದ ನಿಲುವನ್ನು ನೋಡಿ ಶತ್ರುಗಳು ಹಿಂದಿಗಿಂತ ಜಾಗೃತರಾಗಿದ್ದಾರೆ. ಎಡಪಕ್ಷಗಳ ಒಗ್ಗಟ್ಟನ್ನು ಮುರಿಯಲು ಎಲ್ಲಾ ವಿಧವಾದ ಪಿತೂರಿಗಳನ್ನು ಮಾಡುತ್ತಿರುವ ಸೂಚನೆಗಳು ಆಗಲೇ ಕಂಡು ಬರುತ್ತಿವೆ.

ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ವಾಮಪಕ್ಷಗಳಿಗೆ ಸುಮಾರು ನೂರು ಸ್ಥಾನಗಳು ಲಭಿಸುವ ಸಾಧ್ಯತೆಗಳಿವೆ. ಲೋಕಸಭೆಯಲ್ಲಿ ವಾಮಪಕ್ಷಗಳ ಶಕ್ತಿ ಹೆಚ್ಚಾಗುವ ಈ ಸಂದರ್ಭದಲ್ಲಿ, ಒಕ್ಕೂಟದಿಂದ ಚರಣಸಿಂಗರ ಮೈತ್ರಿಕೂಟವನ್ನು ದೂರ ಮಾಡಲು ಬೂರ್ಜ್ವಾಗಳು ಈಗಾಗಲೇ ತಯಾರಾಗಿದ್ದಾರೆ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯಲ್ಲಿ ಆಸಕ್ತಿಯಿರುವ ಜನತೆ ಇದರ ಬಗ್ಗೆ ಜಾಗ್ರತೆಯಿಂದ ಇರಬೇಕು. ನನ್ನ ಅಭಿಪ್ರಾಯದಲ್ಲಿ, ಕೇರಳ ಸಿ.ಪಿ.ಐ.ನ ನಿಲುವು ಸ್ವಲ್ಪ ತಡವಾಗಿ ಬಂತು. ರಾಜ್ಯದ ಹೊಸ ರಾಜಕೀಯ ಪರಿಸ್ಥಿತಿಗಳು ಮತ್ತು ಎ. ಕೆ. ಅಂಟೋನಿಯವರ ನಿಲುವು ಇದಕ್ಕೆ ಕಾರಣ. ಈ ನ್ಯೂನತೆಯನ್ನು ಅಂಗೀಕರಿಸಲೇಬೇಕು.

ಹೊಸ ಲೋಕಸಭೆಯಲ್ಲಿ ವಾಮಪಕ್ಷಗಳ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚು ಮಾಡುವ ಸಲುವಾಗಿ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಬೆಳೆಸಲು ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕು. ಏನೇ ಹೇಳಿದರೂ ಕೇರಳದಲ್ಲಿ ಒಳ್ಳೆಯ ಪ್ರಾರಂಭ ಆಗಿದೆ.

ಸರ್ವಾಧಿಕಾರಿ-ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟವನ್ನು ಮುಂದುವರಿಸಬೇಕು. ಎರಡು ಅಪಾಯಗಳನ್ನು ಎದುರಿಸುವ ಶಕ್ತಿಗಳು ಎಲ್ಲಾ ಸ್ಥಳಗಳಲ್ಲೂ ಒಂದೇ ರೀತಿ ಇಲ್ಲದಿರುವುದರಿಂದ ವಿವಿಧ ರಾಜ್ಯಗಳಲ್ಲಿ ಅದಕ್ಕೆ ರೂಪ ವ್ಯತ್ಯಾಸವಿದೆ. ಕೊನೆಯದಾಗಿ, ನಮ್ಮ ಚಟುವಟಿಕೆಗಳು ಈ ಶತ್ರುಗಳಿಗೆದುರಾಗಿ ಇರಬೇಕೆಂಬುದೇ ನನಗೆ ಹೇಳುವುದಕ್ಕಿರುವುದು. ಎಡಪಕ್ಷಗಳ ಐಕ್ಯತೆಗೆ ಬುನಾದಿ ಹಾಕಬೇಕಾದವರು ಕಮ್ಯುನಿಸ್ಟರು ಎಂಬುದನ್ನು ಮರೆಯಬಾರದು. ಒಂದು ಕಮ್ಯುನಿಸ್ಟ್ ಪಕ್ಷ ಬೂರ್ಜ್ವಾ ವರ್ಗದೊಡನೆ ಮೈತ್ರಿಮಾಡಿ ಇನ್ನೊಂದು ಕಮ್ಯುನಿಸ್ಟ್ ಪಕ್ಷದೊಡನೆ ಹೋರಾಡುವುದರ ಮೂಲಕ ಎಡ ಐಕ್ಯತೆಯನ್ನು ಒಡೆಯುವುದಕ್ಕೆ ಅನುಮತಿ ಕೊಡಬಾರದು. ಅದನ್ನು ಪುನಃ ಪ್ರಾರಂಭಿಸಿದಲ್ಲಿ, ಐಕ್ಯತೆ ಸಾಧಿಸುವ ಎಲ್ಲಾ ಪ್ರಯತ್ನಗಳು ವಿಫಲವಾಗಿದೆಯೆಂದು ನಾವು ಒಪ್ಪಬೇಕಾಗುತ್ತದೆ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸುವ ಅವಶ್ಯಕತೆ ಮತ್ತು ಮಹತ್ವವನ್ನು ಜನತೆ ಅರಿಯುವಂತಾಗಬೇಕೆಂದು ನಾವು ಆಶಿಸುತ್ತೇವೆ. ಮಧ್ಯಕಾಲೀನ ಚುನಾವಣೆಯಲ್ಲಿ ಸರ್ವಾಧಿಕಾರ ಹಾಗೂ ಕೋಮುವಾದಿ ಶಕ್ತಿಗಳಿಂದ ಉಂಟಾಗುವ ಅಪಾಯವನ್ನು ಅರಿತು ಲೋಕದಳ-ಕಾಂಗ್ರೆಸ್ ಮೈತ್ರಿಕೂಟಕ್ಕೆ ಬೆಂಬಲ ಕೊಡಬೇಕಾದ ಅವಶ್ಯಕತೆಯನ್ನು ಸಹಾ ಜನತೆ ಅರಿತುಕೊಳ್ಳುವರೆಂದು ನಮ್ಮ ನಿರೀಕ್ಷೆ.

ಕನ್ನಡಕ್ಕೆ — ಎಂ. ದಾಮು. ಬಿ.ಇ.ಎಲ್.

ಈಶಾನ್ಯ ಭಾರತದಲ್ಲಿ ನಡೆಯುತ್ತಿರುವುದೇನು ?

ಇ.ಎಂ.ಎಸ್. ನಂಬೂದಿರಿಪಾಡ್

ಭಾರತದ ಈಶಾನ್ಯ ವಲಯದಲ್ಲಿನ ರಾಜಕೀಯ ಚಿತ್ರದ ಸಮೀಕ್ಷೆ ನಡೆಸಿದ ವರಿಗೆ, ಈ ದೇಶದ ಆಳುವ ವರ್ಗಗಳು ದೇಶದ ಭದ್ರತೆಯ ಬಗ್ಗೆ ಅದೇನೇ ಹೇಳಿಕೊಳ್ಳುತ್ತಿರಲಿ, ದೇಶದಲ್ಲಿ ಸ್ಥಿರತೆಯೂ ಇಲ್ಲ; ದೇಶದ ಐಕ್ಯತೆಯೂ ಇಂದಿನ ಆಳುವವರ್ಗಗಳ ಕೈಯ್ಯಲ್ಲಿ ಸುಭದ್ರವಾಗಿಲ್ಲವೆಂಬುದಂತೂ ಸ್ಪಷ್ಟವಾಗಿ ತಿಳಿದೀತು.

ಈ ಪ್ರದೇಶದಲ್ಲಿರುವ ಪ್ರತಿಯೊಂದು ರಾಜ್ಯವೂ, ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶವೂ ಅಸ್ಥಿರತೆಯಲ್ಲಿ ತೊನೆದಾಡುತ್ತಿದೆ. ಒಂದು ಬುಡಕಟ್ಟು ಜನಾಂಗದವರು ಇನ್ನೊಂದು ಬುಡಕಟ್ಟು ಜನಾಂಗದ ವಿರುದ್ಧ, ಗುಡ್ಡಗಾಡು ಜನರು ಬಯಲು ಸೀಮೆಯ ಜನರ ವಿರುದ್ಧ "ಮಣ್ಣಿನ ಮಕ್ಕಳು" ಹೊರಗಿನವರ ವಿರುದ್ಧ, ಹೀಗೆ ಪ್ರತಿಯೊಂದು ಜನವಿಭಾಗವೂ ಇನ್ನೊಂದರ ವಿರುದ್ಧ ಸಂಘರ್ಷದಲ್ಲಿ ನಿರತವಾಗಿರುವುದು ಈ ಪ್ರದೇಶದ ಜನರಲ್ಲಿ ಕಂಡುಬರುತ್ತಿದೆ. ಈ ರೀತಿ ಜನರು ಪರಸ್ಪರ ತಿಕ್ಕಾಟದಲ್ಲಿ ನಿರತರಾಗಿರುವ ಈ ನೆಲದಲ್ಲಿ ಭಾರತ ಒಕ್ಕೂಟದ ಅಧಿಕಾರಿಗಳ ವಿರುದ್ಧವೂ ಇನ್ನೊಂದು ಸಂಘರ್ಷ ಮುಂದುವರಿಯುತ್ತಿದೆ ಬೆಳೆಯುತ್ತಿದೆ. ಒಮ್ಮೊಮ್ಮೆ ಇದು ಸಶಸ್ತ್ರ ಹೋರಾಟವಾಗಿಯೂ ಕಾಣಿಸಿಕೊಳ್ಳುತ್ತಿದೆ.

ವಿದೇಶೀ ಸಾಮ್ರಾಜ್ಯಶಾಹಿಗಳೂ ದೇಶೀಯ ಪ್ರತಿಗಾಮಿಶಕ್ತಿಗಳೂ ಈ ಸಂದಿಗ್ಧ ಪರಿಸ್ಥಿತಿಯ ದುರ್ಲಾಭ ಪಡೆದು ಈ ಪ್ರದೇಶದಲ್ಲಿ ನೆಲೆಸಿರುವ ಬೇರೆಬೇರೆ ವಿಭಾಗದ ಜನರ ಒಗ್ಗಟ್ಟನ್ನೂ ಸೌಹಾರ್ದವನ್ನೂ ಹಾಳುಗೆಡವಲು ಪ್ರಯತ್ನಿಸುತ್ತಿರುವುದರಲ್ಲಿ ಆಶ್ಚರ್ಯವಿಲ್ಲ.

ನಾಗಾಲ್ಯಾಂಡ್ ಮತ್ತು ಮಿಜೋರಾಂ:

ಫೀಜೋಗೆ ನಿಷ್ಠರಾಗಿರುವ ಶಕ್ತಿಗಳು ಮತ್ತು ಕೇಂದ್ರ ಸರಕಾರದ ಸಶಸ್ತ್ರ ದಳಗಳ ನಡುವೆ ಘರ್ಷಣೆ ನಡೆಯುತ್ತಿರುವ ನಾಗಾಲ್ಯಾಂಡ್‌ನಲ್ಲಂತೂ ತೀವ್ರ ಸ್ವರೂಪದ ಈ ತಿಕ್ಕಾಟ ಬಹಳ ಕಾಲದಿಂದ ನಡೆದು ಬಂದಿದೆ. ಹಿಂದೆ ಅಸ್ಸಾಮಿನ ಮಾಜಿ ಮುಖ್ಯಮಂತ್ರಿ ಬಿ. ಪಿ. ಚೌಲಿಹಾ ಮತ್ತು ಸರ್ವೋದಯ ನಾಯಕ ಜಯಪ್ರಕಾಶನಾರಾಯಣರಂತಹ ಉದಾರವಾದಿ ಮುತ್ಸದ್ದಿಗಳಲ್ಲಿ ಅನೇಕರು ನಾಗಾಸಮಸ್ಯೆಗೆ ಶಾಂತಿಯುತ ಪರಿಹಾರ ಕಂಡುಕೊಳ್ಳಲು ಅನೇಕ ಬಾರಿ ಪ್ರಯತ್ನ ನಡೆಸಿದ್ದರೂ ಅವೆಲ್ಲ ವಿಫಲವಾಗಿ ತಿಕ್ಕಾಟ ಇನ್ನೂ ಮುಂದುವರಿಯುತ್ತಿದೆ. ಈ ರಾಜ್ಯವು ಹೆಚ್ಚುಕಡಿಮೆ ಸಂಪೂರ್ಣವಾಗಿ ಭಾರತ ಸರಕಾರದ ಸೈನ್ಯ ಮತ್ತು ಅರೆ ಸೈನಿಕ ದಳಗಳಿಂದ 'ಆಕ್ರಮಿತ ಪ್ರದೇಶ' ದಂತೆಯೇ ಆಳಿಸಿಕೊಳ್ಳಲ್ಪಡುತ್ತಿದೆ. 'ನಾಗಾ ಪೀಪಲ್ಸ್ ಮೂವ್‌ಮೆಂಟ್ ಫಾರ್ ಹ್ಯೂಮನ್ ರೈಟ್ಸ್' ಸಂಸ್ಥೆ ಬಿಡುಗಡೆಗೊಳಿಸಿದ ಒಂದು ವರದಿಯ ಪ್ರಕಾರ ಭಾರತ ಸರಕಾರದ ಸಶಸ್ತ್ರ ಪಡೆಗಳು 'ಸಾರ್ವಜನಿಕ ಮರಣದಂಡನೆಗಳನ್ನು ವಿಧಿಸುತ್ತಿವೆ ಮತ್ತು ಅಂಗಾಂಗಗಳನ್ನೂ ಗುಪ್ತಾಂಗಗಳನ್ನೂ ಛೇಧಿಸುತ್ತಿವೆ.' (ಸ್ಟೇಟ್ಸ್‌ಮನ್, ಅಕ್ಟೋಬರ್ 26)

ಶ್ರೀ ವಿ. ಎಮ್. ತಾರ್ಕುಂಡೆ ಮತ್ತು 'ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್'ನ ಕಾರ್ಯನಿರತ ಅಧ್ಯಕ್ಷ ಹಾಗೂ ಅದರ ನವದೆಹಲಿ ಘಟಕದ ಚೇರ್ಮನ್-ಗೋವಿಂದ ಮುಖೋಟಿ ಅವರು ಕಳೆದ ಏಪ್ರಿಲ್ ತಿಂಗಳಿಂದ ಜುಲೈವರೆಗೆ ಮಿಲಿಟರಿ ಮತ್ತು ಪಾರಾಮಿಲಿಟರಿ ದಳಗಳು ನಡೆಸಿದ ಮಾನಭಂಗ, ಮತ್ತು ಚಿತ್ರಹಿಂಸೆಯ ಘಟನೆಗಳ ಪಟ್ಟಿಯನ್ನೇ ನೀಡಿದ್ದಾರೆ. ಸೈನ್ಯವನ್ನು ಈ ಕೂಡಲೇ ನಾಗಾಹಳ್ಳಿಗಳಿಂದ ಹಿಂದಕ್ಕೆ ಕರೆಸಿ ಬ್ಯಾರಕುಗಳಿಗೆ ಮರಳಿಸದಿದ್ದಲ್ಲಿ ಇಂತಹ ಘಟನೆಗಳು ಇನ್ನೂ ಹೆಚ್ಚಾಗಲಿವೆಯೆಂದೂ ಅವರು ನವದೆಹಲಿಯಲ್ಲಿ ವರದಿಗಾರರಿಗೆ ತಿಳಿಸಿದ್ದಾರೆ. (ಸ್ಟೇಟ್ಸ್‌ಮನ್, ಅಕ್ಟೋಬರ್ 26)

ನಾಗಾಲ್ಯಾಂಡಿನ ನಂತರ ಬರುವ ಹೆಸರು ಮಿಜೋರಾಂ. ಇಲ್ಲೂ ಸಹ ಕಳೆದ ಹಲವಾರು ವರ್ಷಗಳಿಂದ ಸಶಸ್ತ್ರ ಘರ್ಷಣೆ ನಡೆಯುತ್ತಲೇ ಇದೆ. ಸ್ಟೇಟ್ಸ್‌ಮನ್ ಪತ್ರಿಕೆಯ ವಿಶೇಷ ವರದಿಗಾರರೊಬ್ಬರು ಅಂದಿರುವಂತೆ ಇತ್ತೀಚೆಗೆ ಮಿಜೋರಾಂನಲ್ಲಿ ಇನ್ನೂ ಒಂದು ವಿಶಿಷ್ಟ ಹಿನ್ನಡೆ ಕಾಣಿಸಿಕೊಂಡಿದೆ; ಸಾಮಾನ್ಯ ಸ್ಥಿತಿಗೆ ಮರಳುವ ಕಾರ್ಯಕ್ಕೆ ತಡೆಯುಂಟಾಗಿದೆ. ಮಿಜೋ ರಾಷ್ಟ್ರೀಯ ರಂಗದ ಹಿಂಸಾತ್ಮಕ ಚಟುವಟಿಕೆಗಳಿಂದಾಗಿ ಸಶಸ್ತ್ರ ಪಡೆಗಳು ಪುನಃ ಕಾರ್ಯಾಚರಣೆ ಮಾಡಬೇಕಾಗಿದೆ. ಅನ್ಯರಾಜ್ಯಗಳ ಜನರ ಕುರಿತಾಗಿ ಉಂಟಾಗಿರುವ ವಿರೋಧಿ ಮನೋಭಾವವು ಗುಡ್ಡಗಾಡು ಜನಾಂಗ ಮತ್ತು ಇತರ ಜನಾಂಗಗಳಲ್ಲೂ ತೀವ್ರ ಕ್ರೋಧಕ್ಕೆ ಅವಕಾಶ ಮಾಡಿಕೊಟ್ಟಿದೆ. (ಅಕ್ಟೋಬರ್ 25)

ನಾಗಾಲ್ಯಾಂಡ್ ಮತ್ತು ಮಿಜೋರಾಂ ಇವೆರಡೂ ರಾಜ್ಯಗಳ ತೀವ್ರವಾದಿಗಳೂ ಭಾರತ ಒಕ್ಕೂಟದೊಂದಿಗೆ ಯಾವುದೇ ಸಂಬಂಧವಿಲ್ಲದ ಸ್ವಾಯತ್ತತೆ ಬೇಕೆಂಬ ಮಹತ್ತಮ ಬೇಡಿಕೆಯಿರಿಸಿಕೊಂಡು ಹೋರಾಟ ನಡೆಸುತ್ತಿದ್ದಾರೆ. ಅವರಲ್ಲಿನ 'ಮಧ್ಯಮ ಮಾರ್ಗಿಗಳು' ಸಹ ಮಿಜೋರಾಂಗೆ ಭಾರತ ಒಕ್ಕೂಟದೊಳಗೆ ಪರಿಪೂರ್ಣ ರಾಜ್ಯದ ಸ್ಥಾನವಾದರೂ ಸಿಗಬೇಕೆಂದು ಒತ್ತಾಯಿಸುತ್ತಿದ್ದಾರೆ. ಈ ಎರಡನೆಯ ಬೇಡಿಕೆಯನ್ನಾದರೂ ಈಡೇರಿಸಲು ಭಾರತೀಯ ಆಡಳಿತೆ ಖಂಡತುಂಡವಾಗಿ ನಿರಾಕರಿಸಿದ ಕಾರಣ ಈ ಎರಡೂ ರಾಜ್ಯಗಳ ಜನತೆ ಮತ್ತು ಭಾರತ ಒಕ್ಕೂಟದ ನಡುವಣ ಬಾಂಧವ್ಯ ಸಂಪೂರ್ಣ ಹದಗೆಟ್ಟಿದೆ.

ರಾಜಕೀಯ ಪರಿಹಾರ :

ಕೆಲಕಾಲದ ಹಿಂದೆ ನಾಗಾಮುಂದಾಳು ಫೀಜೋ ಮತ್ತು ಆಗಿನ ಪ್ರಧಾನಿ ಮೊರಾರ್ಜಿ ದೇಸಾಯಿ ನಡುವೆ ಲಂಡನ್ನಿನಲ್ಲಿ ಸಂಕ್ಷಿಪ್ತ ಮಾತುಕತೆಗಳು ನಡೆದುದನ್ನು ಇಲ್ಲಿ ಸ್ಮರಿಸಬಹುದು. ಫೀಜೋನೊಡನೆ ಮಾತುಕತೆ ನಡೆಸಬೇಕಾದರೆ ಆತ ತಾನು ಭಾರತೀಯ ಪ್ರಜೆಯೆಂಬುದನ್ನು ಒಪ್ಪಿಕೊಳ್ಳಬೇಕು ಎಂಬ ಶರತ್ತಿಗೆ ಮೊರಾರ್ಜಿ ದೇಸಾಯಿ ಅಂಟಿಕೊಂಡ ಕಾರಣ ಮಾತುಕತೆಗಳು ಫಲಪ್ರದವಾಗಿ ಮುಂದುವರಿಯಲು ಸಾಧ್ಯವಾಗಲೇ ಇಲ್ಲ; ಏಕೆಂದರೆ ಮಾತುಕತೆಯಲ್ಲಿ ನಿರ್ಧರಿಸಬೇಕಾದ ಪ್ರಶ್ನೆಯೂ ಇದೇ ಆಗಿತ್ತು. ನಾಗಾಗಳಿಗೆ ತಮ್ಮ ಪ್ರತ್ಯೇಕ ರಾಷ್ಟ್ರೀಯತೆಯ ಕುರಿತು ಅಪಾರ ಅಭಿಮಾನವಿದೆ, ಹಾಗಾಗಿ ಫೀಜೋ ಇದನ್ನು ಕೈಬಿಡಲು ಸಿದ್ಧನಿರಲಿಲ್ಲ. ಮೊರಾರ್ಜಿದೇಸಾಯಿ ತನ್ನ ಹಟಮಾರಿತನವನ್ನು ಸ್ವಲ್ಪವಾದರೂ ಬಿಟ್ಟುಕೊಟ್ಟಿದ್ದರೆ ಪ್ರಾಯಶಃ ಭಾರತೀಯ ಒಕ್ಕೂಟದ ಚೌಕಟ್ಟಿನೊಳಗೇ ನಾಗಾಗಳಿಗೆ ಪ್ರತ್ಯೇಕ ರಾಜ್ಯವನ್ನು ನಿರ್ಮಿಸುವ ಕುರಿತು ಮಾತುಕತೆಗಳನ್ನು ಪ್ರಾರಂಭಿಸಬಹುದಿತ್ತು. ಫೀಜೋ ಕೂಡಾ ಇದನ್ನೇ ಅಂದಾಜು ಮಾಡಿದ್ದ ಮತ್ತು ಬಹುತೇಕ ಅದನ್ನು ಕಾರ್ಯರೂಪಕ್ಕೂ ತರಬಹುದಾಗಿತ್ತು.

ನಿಷೇಧಿತ ಮಿಜೋ ರಾಷ್ಟ್ರೀಯ ರಂಗದ ಮುಂದಾಳು ಲಾಲ್ಡೆಂಗಾ ಕೇಳುತ್ತಿರುವುದೂ ಇದನ್ನೇ. ಅಕ್ಟೋಬರ್ 28ರ ನವದೆಹಲಿಯ ಯು. ಎನ್. ಐ. ಏಜನ್ಸಿ ವರದಿಯಂತೆ ಹದಿನಾಲ್ಕು ವರ್ಷಗಳಿಂದ ನಡೆಯುತ್ತಿರುವ ಮಿಜೋ ಬಂಡಾಯದ ಸಮಸ್ಯೆಗೆ ಭಾರತೀಯ ಸಂವಿಧಾನದ ಚೌಕಟ್ಟಿನೊಳಗೇ ಒಂದು ಪರಿಹಾರ ಕಂಡುಕೊಳ್ಳುವ ಬಗ್ಗೆ ಲಾಲ್ಡೆಂಗಾ ಇನ್ನೂ ಆಸೆ ಬಿಟ್ಟಿಲ್ಲ.

ವಾರ್ತಾ ಏಜನ್ಸಿಯೊಂದಕ್ಕೆ ನೀಡಲಾದ ಒಂದು ಸಂದರ್ಶನದಲ್ಲಿ ಲಾಲ್ಡೆಂಗಾ, "ಸಮಸ್ಯೆಯನ್ನು ಜಾಣತನದಿಂದ ಎದುರಿಸಿದರೆ ಸಂವಿಧಾನದ ಚೌಕಟ್ಟಿನೊಳಗೇ ಅದಕ್ಕೊಂದು ಪರಿಹಾರ ಕಂಡುಕೊಳ್ಳುವುದು ಸಾಧ್ಯವೆಂದು ನಾನು ದೃಢವಾಗಿ ನಂಬಿದ್ದೇನೆ" ಎಂದಿದ್ದಾನೆ. "ನನಗೆ ಸೈನಿಕ ಹಸ್ತಕ್ಷೇಪದ ಮೂಲಕ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ವಿಶ್ವಾಸವಿಲ್ಲ. ರಾಜಕೀಯ ಸಮಸ್ಯೆಯೊಂದನ್ನು ಬಗೆಹರಿಸುವುದು ಸಶಸ್ತ್ರ ದಳದ ಅಪಾರ ಬಲಕ್ಕೂ ಸಾಧ್ಯವಿಲ್ಲ. ಕಳೆದ ಹದಿನಾಲ್ಕು ವರ್ಷಗಳಿಂದ ಈ ಸಮಸ್ಯೆ ಬಗೆಹರಿಯದೆ ಉಳಿದಿರುವುದೇ ಇದಕ್ಕೆ ಪುರಾವೆ" ಎಂದಿದ್ದಾನೆ. (ಸ್ಟೇಟ್ಸ್‌ಮನ್, ಅಕ್ಟೋಬರ್ 29)

ನಾಗಾಸಮಸ್ಯೆಯಂತೂ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದಂದಿನಿಂದಲೂ ಇದೆ. ಭಾರತೀಯ ಒಕ್ಕೂಟದೊಳಗೆ ತಮ್ಮನ್ನು ಸೇರ್ಪಡೆಗೊಳಿಸಲಾದುದಕ್ಕೆ ನಾಗಾಗಳು ಎಂದೂ ಸಮ್ಮತಿಸಿರಲಿಲ್ಲ. ನಾಗಾಗಳ ಸಾಂಸ್ಕೃತಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಸಹಾನುಭೂತಿಯಿಂದ ಪರಿಗಣಿಸಿದರೆ ನಾಗಾ ಸಮಸ್ಯೆ ಪರಿಹಾರವಾದೀತು ಎಂದು ನಮ್ಮ ಪ್ರಥಮ ಪ್ರಧಾನಿ ಜವಾಹರಲಾಲನೆಹರು ತಿಳಿದಿದ್ದರು. ಹಾಗಾಗಿ ನೆಹರೂ ನಾಗಾ ಜನರ ಆಕಾಂಕ್ಷೆಗಳನ್ನೆಲ್ಲ 'ಉದಾರ ಮನೋಭಾವ'ದಿಂದ ಈಡೇರಿಸಲು ಪ್ರಯತ್ನಿಸಿದರು. ಆದರೆ ತುಂಬಾ ಸ್ವಾಭಿಮಾನಿಗಳಾದ ನಾಗಾಗಳು ನೆಹರೂ ತಮ್ಮನ್ನು 'ಪೂಸಿ' ಮಾಡುತ್ತಿದ್ದಾರೆಂದೂ ಭಾವಿಸಿದರು. ಅವರಿಗೆ ಬೇಕಾಗಿದ್ದುದಾಗಲೀ ಅಥವಾ ಅವರು ಕೇಳುತಿದ್ದುದಾಗಲೀ ಇದಲ್ಲ. ಒಂದು ರಾಷ್ಟ್ರೀಯತೆಯಾಗಿ ತಮ್ಮ ಪ್ರತ್ಯೇಕತೆಯನ್ನು ಗುರುತಿಸಬೇಕೆಂಬ ರಾಜಕೀಯ ಬೇಡಿಕೆ ಅವರದಾಗಿತ್ತು. ಉದಾರ ಮನೋಭಾವದ ಬೂರ್ಜ್ವಾ ರಾಜಕಾರಿಣಿ ನೆಹರೂ ಈ ವಾಸ್ತವಿಕತೆಯನ್ನು ಒಪ್ಪಿಕೊಳ್ಳದಾದರು. ಹಾಗಾಗಿ ಫೀಜೋನ ಮುಂದಾಳುತ್ವದಲ್ಲಿರುವ ನಾಗಾಗಳಿಗೂ ಭಾರತ ಒಕ್ಕೂಟದ ಸೈನ್ಯಕ್ಕೂ ನಡುವೆ ಸಶಸ್ತ್ರ ಹೋರಾಟಕ್ಕೆ ಇದೇ ಕಾರಣವಾಯಿತು.

ಇಂತಹದೇ ಪರಿಸ್ಥಿತಿ ಮಿಜೋ ಮತ್ತು ಕೇಂದ್ರ ಆಡಳಿತೆಯ ನಡುವಣ ಸಂಬಂಧದಲ್ಲೂ ಉಂಟಾಗಿದೆಯೆನ್ನುವುದು ಮೇಲೆ ಪ್ರಸ್ತಾಪಿಸಿದ ಲಾಲ್ಡೆಂಗನ ಸಂದರ್ಶನದಿಂದ ಸ್ಪಷ್ಟವಾಗುತ್ತದೆ. ಕನಿಷ್ಟ ಈ ಹಂತದಲ್ಲಾದರೂ ನಾಗಾ ಮತ್ತು ಮಿಜೋ ಈ ಅವಳಿ ಸಮಸ್ಯೆಗಳನ್ನು ಲಾಲ್ಡೆಂಗಾ ನೀಡಿದ ಸಲಹೆಯ ಆಧಾರದಲ್ಲಿ ಬಗೆಹರಿಸುವ ಪ್ರಯತ್ನ ಮಾಡಲಾಗುವುದೇ ಎನ್ನುವುದು ಈಗಿರುವ ಪ್ರಶ್ನೆ.

ಮೇಘಾಲಯದಲ್ಲಿನ ಪರಿಸ್ಥಿತಿ :

ಈ ನಡುವೆ ಮೇಘಾಲಯದಲ್ಲೂ ಒಂದೆಡೆ 'ಖಾಸಿ' ಮತ್ತಿತರ ಗುಡ್ಡಗಾಡು ಜನಾಂಗದವರು ಮತ್ತು ಇನ್ನೊಂದೆಡೆ ಬಯಲು ಸೀಮೆಯ ಜನರ ಮಧ್ಯೆ ದ್ವೇಷ ಹತ್ತಿ ಉರಿಯುತ್ತಿದೆ. 'ಹಿಂದೂ' ಪತ್ರಿಕೆಯ ಜಿ. ಕೆ. ರೆಡ್ಡಿ ಹೇಳುವಂತೆ "ಅವರ ಆಕ್ರೋಶದ ಮುಖ್ಯ ಗುರಿ ಬಂಗಾಲಿಗಳಾಗಿದ್ದರೂ, ಮತ್ತು ಕಳೆದ ವಾರವಷ್ಟೇ ಇದು ದೊಡ್ಡ ಹಿಂಸಾಕಾಂಡವೊಂದು ಆಸ್ಫೋಟಿಸಲು ಕಾರಣವಾಗಿದ್ದರೂ, 'ಅನ್ಯ ರಾಜ್ಯದ' ಜನರ ಕುರಿತಾದ ವಿರೋಧಿ ಭಾವನೆ ರಾಜ್ಯದಲ್ಲಿ ಹೊಸತೊಂದು ಕಂಟೋನ್ಮೆಂಟ್ ನಿರ್ಮಾಣ ಮಾಡುವುದರ ವಿರುದ್ಧವೂ ಚಳುವಳಿ ನಡೆಸುವಷ್ಟು ಅತಿರೇಕಕ್ಕೆ ಹೋಗಿದೆ. (ಹಿಂದೂ, ನವೆಂಬರ್ 1)

ಮೇಲೆ ಹೇಳಲಾದ ಘಟನೆಯು ಅಸ್ಸಾಮಿನ ರಾಜಧಾನಿ ಶಿಲ್ಲಾಂಗ್‌ನಲ್ಲೂ ಆಸ್ಫೋಟಕ ಪರಿಸ್ಥಿತಿಯನ್ನುಂಟುಮಾಡಿದೆ. ಅಕ್ಟೋಬರ್ 22ರ 'ಸ್ಟೇಟ್ಸ್‌ಮನ್' ಈ ಘಟನೆಗಳ ಬಗ್ಗೆ ಬರೆಯುತ್ತಾ "ಈ ಗಲಭೆ, ದ್ವೇಷ ಮತ್ತು ದೊಂಬಿ ಇತ್ಯಾದಿಗಳಿಂದಾಗಿ ಒಂದು ಜೀವ ಹಾನಿಯಾಗಿದೆ ಮತ್ತು ನೂರಾರು ಜನರಿಗೆ ಗಾಯಗಳಾಗಿವೆ" ಎಂದಿದೆ. "ಶಿಲ್ಲಾಂಗ್‌ನಲ್ಲಿ 'ಕರ್ಫ್ಯೂ'ಹೇರಿ - ಕಾನೂನು ಪಾಲನೆ ಮಾಡಬಹುದೆಂದು ಸೈನ್ಯವು ಭಾವಿಸಿರಬಹುದು. ಆದರೆ ಈ ಮೌನವನ್ನು ಶಾಂತಿಯೆಂದು ತಿಳಿಯಲಾಗದು. 'ಖಾಸಿ' ಮತ್ತು 'ಜಂಟಿಯಾ' ಬುಡಕಟ್ಟಿನ ಜನರ ಭಯವನ್ನು ಪರಿಹಾರ ಮಾಡಲು ಪ್ರಯತ್ನ ಮಾಡದಿದ್ದಲ್ಲಿ ಮೇಘಾಲಯವೂ ನಾಗಾಲ್ಯಾಂಡ್, ಮಿಜೋರಾಂ ಮತ್ತು ಮಣಿಪುರಗಳ ಮಾದರಿಯನ್ನೇ ಅನುಸರಿಸುವ ಅಪಾಯವಿದೆ. ಮುಂಬರುವ ಚುನಾವಣೆಗಳ ಕಾರಣದಿಂದಾಗಿಯೋ ಏನೋ ಗುಡ್ಡಗಾಡು ಜನರ ಮುಂದಾಳುಗಳು ರಾಜ್ಯದ ಬೇರೆಬೇರೆ ಜನಾಂಗಗಳ ಪ್ರಮಾಣದಲ್ಲಿನ ಸಮತೋಲನವನ್ನು ಅಸ್ತವ್ಯಸ್ತಗೊಳಿಸಲಾದೀತೆಂಬ ಭಯ ವ್ಯಕ್ತಪಡಿಸಿದ್ದಾರೆ." ಎಂದೂ 'ಸ್ಟೇಟ್ಸ್‌ಮನ್' ವರದಿ ಮಾಡಿದೆ.

"ಮಣಿಪುರದಲ್ಲೂ ಪರಿಸ್ಥಿತಿ ಕಳವಳಕರವಾಗಿದೆ; ಮಾತ್ರವಲ್ಲ ದಿನೇ ದಿನೇ ಬಿಗಡಾಯಿಸುತ್ತಿದೆ. ಏಪ್ರಿಲ್ ತಿಂಗಳಲ್ಲಿ ನಾಲ್ವರು ಗಡಿಭದ್ರತಾಪಡೆಯ ಜವಾನರ ಕೊಲೆಯಾದ ಮೇಲೆ ಜೂನ್, ಜುಲೈ ಮತ್ತು ಅಗೋಸ್ತು ತಿಂಗಳಲ್ಲಿ ಅಲ್ಲಲ್ಲಿ ಒಂದೊಂದಾಗಿ ಕೊಲೆಗಳಾಗಿರುವ ಬಗ್ಗೆ ವರದಿಗಳು ಬಂದಿವೆ. ಈ ಬಗೆಯ ಮಾರಕ ಆಕ್ರಮಣಗಳು, ಶಸ್ತ್ರಾಸ್ತ್ರಗಳನ್ನು ಕಸಿದುಕೊಳ್ಳುವುದು, ಬಂಧಿತ ಬಂಡುಗಾರರು ಸೆರೆಮನೆಯಿಂದ ತಪ್ಪಿಸಿಕೊಳ್ಳುತ್ತಿರುವುದು ಇತ್ಯಾದಿಯನ್ನು ತಡೆಯಲು ಜಾಗೃತದಳದ ಪಡೆಗಳಿಗೂ ಸಾಧ್ಯವಾಗುತ್ತಿಲ್ಲ. ಒಮ್ಮೆಯಂತೂ ಮೆಜಿಸ್ಟ್ರೇಟರ ನ್ಯಾಯಾಲಯದಿಂದಲೇ ಓರ್ವ ಕೈದಿ ಪರಾರಿಯಾಗಿದ್ದಾನೆ. ಇಂತಹ ಘಟನೆಗಳಲ್ಲಿ ಸಾರ್ವಜನಿಕರು ಅಥವಾ ಸರಕಾರಿ ಯಂತ್ರವೂ ಶಾಮೀಲಾಗಿರಬಹುದು. ಅದರೊಂದಿಗೆ ಮಿಟಿಯೆಟ್ ಪೀಪಲ್ಸ್ ಲಿಬರೇಶನ್ ಆರ್ಮಿಯ ನೇತೃತ್ವದಲ್ಲಿರುವ ಭೂಗತ ಚಳುವಳಿಯ ಸಂಯೋಜನೆ ಮತ್ತು ಉದ್ದೇಶಗಳೂ ತುಂಬಾ ನಿಗೂಢವಾಗಿವೆ ಎಂಬುದನ್ನು ಒಪ್ಪಿಕೊಳ್ಳಬೇಕು." (ಸ್ಟೇಟ್ಸ್‌ಮನ್-ಅಕ್ಟೋಬರ್ 25).

ಹೀಗೆ ಮೂವತ್ತು ವರ್ಷಗಳ ಕಾಲದ ಕಾಂಗ್ರೆಸ್ಸಿನ ಸುಭದ್ರ ಆಳ್ವಿಕೆ ಮತ್ತು ಎರಡು ವರ್ಷಕ್ಕೂ ಅಧಿಕ ಕಾಲದ ಜನತಾ ಆಳ್ವಿಕೆ ಇವೆರಡೂ ಈಶಾನ್ಯ ಭಾರತದಲ್ಲಿ ತೀರಾ ಅಭದ್ರ ಪರಿಸ್ಥಿತಿಯನ್ನು ಮಾತ್ರ ನಿರ್ಮಾಣ ಮಾಡಿವೆ.

ತ್ರಿಪುರಾ-ವಿಭಿನ್ನ ಪರಿಸ್ಥಿತಿ:

ಗಿರಿಜನರನ್ನೂ ಗಿರಿಜನೇತರರನ್ನೂ ಪ್ರಜಾಸತ್ತಾತ್ಮಕ ಐಕ್ಯತೆಯಲ್ಲಿ ಒಂದುಗೂಡಿಸುವ ಪ್ರಾಮಾಣಿಕ ಯತ್ನ ನಡೆದಿರುವ ಒಂದೇ ರಾಜ್ಯವೆಂದರೆ ತ್ರಿಪುರಾ ಗಿರಿಜನರು ಮತ್ತು ಗಿರಿಜನೇತರ ಜನರ ವಿಶ್ವಾಸವನ್ನು ಗಳಿಸಿಕೊಳ್ಳಲು ಅಲ್ಲಿ ಸಿ. ಪಿ. ಐ (ಎಂ)ಗೆ ಸಾಧ್ಯವಾಗಿದೆ. ಸಿ. ಪಿ. ಐ. (ಎಂ) ಮುಂದಾಳ್ತನದಲ್ಲಿರುವ ಸರಕಾರವು ಗಿರಿಜನ ಸಮಸ್ಯೆಗೆ ಸೂಕ್ತಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಗುಡ್ಡಗಾಡು ಜನರು ಬಹುಸಂಖ್ಯಾತರಾಗಿರುವ ಕಡೆಗಳಲ್ಲಿ ಅವರಿಗೆ ಪ್ರಾದೇಶಿಕ ಸ್ವಾಯತ್ತತೆ ನೀಡುವ ಪ್ರಯತ್ನ ಮಾಡಿತು.

ಇದಕ್ಕೆ ಆಗಿನ ಪ್ರಧಾನಿ ಮೊರಾರ್ಜಿ ದೇಸಾಯಿ ನೇತೃತ್ವದ ಕೇಂದ್ರ ಸರಕಾರವು ಆಕ್ಷೇಪವೊಡ್ಡಿದ ಕಾರಣ ಸಂವಿಧಾನದ ಆರನೇ ಶೆಡ್ಯೂಲಿನ ಮೂಲಕ ಈ ಯೋಜನೆಯನ್ನು ಕಾರ್ಯಗತ ಮಾಡುವುದು ಅಸಾಧ್ಯವಾಯಿತು. ಹಾಗಾಗಿ ಎಡರಂಗ ಸರಕಾರವು ಏಳನೇಶೆಡ್ಯೂಲಿನ ಮೂಲಕ ಸ್ವಾಯತ್ತ ಜಿಲ್ಲಾ ಕೌನ್ಸಿಲ್ ವಿಧೇಯಕವನ್ನು ಜಾರಿಗೆ ತಂದು ಆಮೂಲಕ ಸ್ವಾಯತ್ತತೆ ನೀಡುವುದಕಷ್ಟೇ ಈ ಯೋಜನೆಯನ್ನು ಪರಿಮಿತಗೊಳಿಸಬೇಕಾಯಿತು. ಇದನ್ನು ಕೂಡಾ ಗಿರಿಜನೇತರಕೋಮುಗಳ ಅನೇಕ ಸಂಕುಚಿತವಾದಿ ಶಕ್ತಿಗಳು ಉಗ್ರವಾಗಿ ವಿರೋಧಿಸಿದರು. ಇವರು ಸಂಘಟಿಸಿದ 'ಅಮ್ರ ಬಂಗಾಳಿ' ಚಳುವಳಿಗೆ ಕಾಂಗ್ರೆಸ್ (ಐ) ಮತ್ತು ಜನತಾಪಕ್ಷಗಳೂ ಬೆಂಬಲ ನೀಡಿವೆ.

ಕಾರ್ಯಕ್ರಮಕ್ಕೆ ಬದ್ಧವಾದ ನಿಲುಮೆ:

ಆಳುವವರ್ಗಕ್ಕೆ ಸೇರಿದ ರಾಜಕೀಯ ಪಕ್ಷಗಳು ಮತ್ತು ಅವುಗಳ ಸರಕಾರಗಳು ಅನುಸರಿಸಿದ ಕ್ರಮಕ್ಕಿಂತ ಬೇರೆಯೇ ಆದ ಧೋರಣೆಯೊಂದನ್ನು ಸಿ. ಪಿ. ಐ. (ಎಂ) ಮುಂದಾಳುತ್ವದಲ್ಲಿರುವ ತ್ರಿಪುರಾದ ಎಡರಂಗ ಸರಕಾರ ಅನುಸರಿಸಿದುದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ಸಿ. ಪಿ. ಐ. (ಎಂ) ತನ್ನ ಪಕ್ಷದ ಕಾರ್ಯಕ್ರಮದಲ್ಲೇ ಈ ಕೆಳಗಿನ ಆಶ್ವಾಸನೆ ನೀಡಿದೆ.

"ಗುಡ್ಡಗಾಡು ಪ್ರದೇಶ ಅಥವಾ ವಿಶಿಷ್ಟ ಜನಾಂಗಗಳಿಗೆ ಸೇರಿರುವ ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳಲ್ಲಿ ಇತರರಿಗಿಂತ ಭಿನ್ನವಾಗಿರುವ ಜನರು ವಾಸಿಸುವ ಪ್ರದೇಶಗಳಿಗೆ ಆಯಾ ರಾಜ್ಯಗಳ ಚೌಕಟ್ಟಿನೊಳಗೆ ಸ್ವಾಯತ್ತತೆಯಿರುವ ಪ್ರಾದೇಶಿಕ ಸರಕಾರಗಳನ್ನು ನೀಡಲಾಗುವುದು. ಇವುಗಳ ಅಭಿವೃದ್ಧಿಗಾಗಿ ಸಂಪೂರ್ಣ ನೆರವನ್ನೂ ನೀಡಲಾಗುವುದು."

ಭಾರತ ಒಕ್ಕೂಟದ ಬಹುರಾಷ್ಟ್ರೀಯ ಸ್ವರೂಪದ ಮೇಲೆ ನಮ್ಮ ಪಕ್ಷವು ನಂಬಿಕೆಯಿರಿಸಿದೆ. ಗುಡ್ಡಗಾಡು ಜನರನ್ನೂ ಸೇರಿಸಿ ಈ ಎಲ್ಲಾ ರಾಷ್ಟ್ರೀಯತೆಗಳಿಗೂ ತಮ್ಮ ಪ್ರತ್ಯೇಕ ಭಾಷೆ, ಸಂಸ್ಕೃತಿ, ಮತ್ತು ಸಮಗ್ರ ರಾಷ್ಟ್ರದ ಜನತೆಯ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳಿಗೆ ವಿರೋಧವಾಗದಂತೆ ಅವರ ಪ್ರತ್ಯೇಕ ಜೀವನಕ್ರಮ ಇತ್ಯಾದಿಗಳನ್ನು ವಿಕಾಸಗೊಳಿಸಲು ನೆರವು ನೀಡುವುದೆಂದೂ ನಮ್ಮ ಕಾರ್ಯಕ್ರಮದಲ್ಲಿ ಹೇಳಲಾಗಿದೆ. ಅಷ್ಟೇಅಲ್ಲ, ಜಗತ್ತಿನ ಎಲ್ಲಾ ಶಾಂತಿಪ್ರಿಯ ದೇಶಗಳು ಮತ್ತು ಜನತೆಯೊಂದಿಗೆ ಭ್ರಾತೃತ್ವದ ಭಾವನೆಗಳನ್ನು ಬೆಳೆಸಿಕೊಳ್ಳುವಂತೆ ನಮ್ಮ ಜನತೆಯನ್ನು ಉತ್ತೇಜಿಸಲಾಗುವುದು.

ಗುಡ್ಡಗಾಡು ಮತ್ತು ಬುಡಕಟ್ಟು ಜನಾಂಗದವರನ್ನೂ ಒಳಗೊಂಡು ಬೇರೆಬೇರೆ ರಾಷ್ಟ್ರೀಯತೆಗಳ 'ವೈವಿಧ್ಯದಲ್ಲಿನ ಏಕತೆ' ಎಂಬ ವಾಸ್ತವಿಕ ಸೂತ್ರಕ್ಕನುಗುಣವಾಗಿ ಭಾರತ ಒಕ್ಕೂಟವು 'ಪ್ರಜಾಸತ್ತಾತ್ಮಕ ಕೇಂದ್ರವಾದ'ದ ಮೇಲೆ ಆಧರಿಸಲ್ಪಟ್ಟ 'ಫೆಡರೇಶನ್' ಆಗಿರಬೇಕೆಂದೂ 'ಭಾರತ ಒಕ್ಕೂಟದಲ್ಲಿರುವ ಎಲ್ಲಾ ರಾಜ್ಯಗಳಿಗೂ ಸ್ವಾಯತ್ತತೆ ಮತ್ತು ಸಮಾನ ಹಕ್ಕುಗಳಿರಬೇಕೆಂದೂ ನಮ್ಮ ಪಕ್ಷ ಘೋಷಿಸಿದೆ. ಇದಕ್ಕೆ ಪ್ರತಿಯಾಗಿ ಭಾರತದ ಆಳುವವರ್ಗಗಳು ದೇಶವನ್ನು ಕೃತಕ ರೀತಿಯಿಂದ 'ಒಂದುಗೂಡಿಸುವ' ಮತ್ತು ಪ್ರಜಾಪ್ರಭುತ್ವವಿರೋಧಿ ಕ್ರಮಗಳ ಮೂಲಕ 'ಸ್ಥಿರತೆ'ಯನ್ನು ತಂದುಕೊಳ್ಳುವ ಕಾರ್ಯದಲ್ಲಿ ನಿರತವಾಗಿವೆ ಇದು ನಿರಂಕುಶಾಧಿಕಾರಕ್ಕೆ ಎಡೆಮಾಡಿ ಕೊಡುತ್ತದೆ.

ಅಸ್ಸಾಮಿನಲ್ಲಿ ನಡೆಯುತ್ತಿರುವ ಚಳುವಳಿ:

ಆಳುವವರ್ಗಗಳು ಅನುಸರಿಸುತ್ತಿರುವಂತಹ ಧೋರಣೆಗಳ ಅನಾಹುತಕಾರಿ ಪರಿಣಾಮವುಂಟಾಗುವುದು ಮೇಲೆ ಹೇಳಿದ ಗುಡ್ಡಗಾಡು ಜನರು ಹೆಚ್ಚಾಗಿರುವ ಪ್ರದೇಶದಲ್ಲಿ ಮಾತ್ರವೇ ಅಲ್ಲ; ಅಸ್ಸಾಂ ನಂತಹ ರಾಜ್ಯಗಳನ್ನೂ ಅದು ಬಾಧಿಸಿದೆ. ಇಲ್ಲಿ 'ವಿದೇಶೀಯರ' (ಬೇರೆ ರಾಜ್ಯಗಳ ಜನರ-ಅನು:) ವಿರುದ್ಧ ನಡೆಸಲಾಗುತ್ತಿರುವ ಚಳುವಳಿ ಅಪಾಯಕಾರಿ ಹಂತಕ್ಕೆ ಮುಟ್ಟಿದೆ. ಪ್ರಾದೇಶಿಕ ಸಂಕುಚಿತವಾದ ವಿಪರೀತಕ್ಕೆ ಹೋಗಿ ಆಡಳಿತಯಂತ್ರವನ್ನು ಅದೆಷ್ಟು ಹಾಳುಗೆಡವಿದೆಯೆಂದರೆ- "ಮೇಲಧಿಕಾರಿಗಳ" ಆದೇಶದ ಮೇಲೆ ಸ್ಥಳೀಯ ನೌಕರಶಾಹಿಗಳು ಹತ್ತಾರು ಸಾವಿರ ಮತದಾರರ ಹೆಸರನ್ನು-ಅವರೆಲ್ಲ ಪರದೇಶೀಯರು ಎಂಬ ನೆಪವೊಡ್ಡಿ ಮತದಾರರ ಪಟ್ಟಿಯಿಂದ ಕಿತ್ತು ಹಾಕಿದ್ದಾರೆ. ಈ ಮತದಾರರೆಲ್ಲ ಹೆಚ್ಚಾಗಿ ಮುಸ್ಲಿಮರು, ಬಂಗಾಳಿಗಳು ಮತ್ತು ನೇಪಾಳಿಗಳು ಕೊನೆಗೆ ಚುನಾವಣಾ ಆಯೋಗವು ಈ ಎಲ್ಲ ಮತದಾರರು 1971 ಮತ್ತು 1977ರ ಚುನಾವಣೆಯ ವೇಳೆ ಮತದಾರರಾಗಿದ್ದ ಕಾರಣ ಅವರ ಹೆಸರನ್ನು ಕಿತ್ತು ಹಾಕಿದುದು ಅಕ್ರಮವೆಂದು ಹೇಳಿ ಈ ತಪ್ಪನ್ನು ಸರಿಪಡಿಸುವಂತೆ ಚುನಾವಣಾ ಅಧಿಕಾರಿಗಳಿಗೆ ಆದೇಶನೀಡಿತು. ಚುನಾವಣಾಆಯೋಗದ ಈಕೃತ್ಯವನ್ನು ಸಂಕುಚಿತವಾದಿಗಳು ವಿರೋಧಿಸಿದರು. ಅಸ್ಸಾಮಿನ ಮುದ್ರಕರ ಸಂಘವು ಈ ಮತದಾರರ ಪಟ್ಟಿಯನ್ನು ಮುದ್ರಿಸಲು ಒಪ್ಪದೆ ಕಡೆಗೆ ಅದನ್ನು ಚುನಾವಣಾ ಅಧಿಕಾರಿಗಳು ಸೈಕ್ಲೋಸ್ಟೈಲ್ ಮಾಡಬೇಕಾಯಿತು. ಇನ್ನು ಇದಕ್ಕೆ ಯಾವ ಪ್ರತಿಕ್ರಿಯೆ ಕಂಡುಬಂದೀತೆಂದು ಹೇಳಲು ಸಾಧ್ಯವಿಲ್ಲ. ಅಂತೂ ಚುನಾವಣೆಗೆ ಸಂಬಂಧಿಸಿದ ಕೆಲಸಗಳಿಗೆ ಇದರಿಂದಾಗಿ ತುಂಬಾ ತೊಂದರೆಯಾಗಿದೆ.

ಪ್ರಾದೇಶಿಕ ಸಂಕುಚಿತವಾದದ ಈ ವಿವಿಧ ಸ್ವರೂಪಗಳನ್ನು ದೇಶದ ಸಮಗ್ರ ಪ್ರಜಾಸತ್ತಾತ್ಮಕ ಚಳುವಳಿಯು ಎದುರಿಸಿ, ರಾಷ್ಟ್ರೀಯತೆ ಮತ್ತು ಗುಡ್ಡಗಾಡು ಜನಾಂಗಗಳ ಕುರಿತು ಸರಕಾರ ತಳೆದಿರುವ ಧೋರಣೆಯನ್ನು ಆಮೂಲಾಗ್ರ ಬದಲಾಯಿಸುವಂತೆ ಪ್ರಜಾಪ್ರಭುತ್ವ ಚಳುವಳಿಯು ಒತ್ತಡ ಹೇರದಿದ್ದಲ್ಲಿ ಈ ದೇಶದ ರಾಜಕೀಯ ಸ್ಥಿರತೆಯೂ ಉಳಿಯಲಾರದು; ದೇಶದ ಒಗ್ಗಟ್ಟಿಗೂ ಅಪಾಯವುಂಟಾದೀತು.

●

ಐ. ಸಿ. ಸಿ. ಕಾರ್ಮಿಕರ ಒಪ್ಪಂದ

ಬೆಂಗಳೂರು ಇಂಡಸ್ಟ್ರಿಯಲ್ ವರ್ಕರ್ಸ್ ಅಂಡ್ ಕಮರ್ಷಿಯಲ್ ಎಂಪ್ಲಾಯೀಸ್ ಯೂನಿಯನ್‌ಘಟಕವಾದ ಕೂಡಿಗೆಹಳ್ಳಿ ಬಳಿಯಿರುವ "ಇಂಡಿಯಾ ಕೋಟೆಡ್ ಕಾರ್ಟೂನ್' ಕಾರ್ಮಿಕರ ವೇತನದ ಹೆಚ್ಚಳದ ಬಗ್ಗೆ ಅನೇಕ ದಿನಗಳಿಂದ ನೆನೆಗುದಿಗೆ ಬಿದ್ದ ಸಮಸ್ಯೆ ತೃಪ್ತಿಕರವಾಗಿ ಕಳೆದ ತಿಂಗಳು ಒಪ್ಪಂದವಾಯಿತು. ಈ ಒಪ್ಪಂದದಿಂದ ಪ್ರತಿ ಕಾರ್ಮಿಕನಿಗೆ ರೂ.55 ಸಂಬಳ ಹೆಚ್ಚಳವಾದಂತಾಗಿದೆ. ಯೂನಿಯನ್ ಪರವಾಗಿ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಸಹಕಾರ್ಯದರ್ಶಿ ವಿ.ಪಿ. ಕುಲಕರ್ಣಿ ಹಾಗೂ ಫ್ಯಾಕ್ಟರಿ ಕಮಿಟಿಯ ಸದಸ್ಯರಾದ ಮೂರ್ತಿ, ಮುನಿರಾಜು ಮತ್ತು ಶಾಮಣ್ಣ ಕಾರ್ಮಿಕರನ್ನು ಪ್ರತಿನಿಧಿಸಿದ್ದರು.

ಇದರ ಅಂಗವಾಗಿ ನಡೆದ ಸರ್ವ ಸದಸ್ಯರ ಸಭೆಯನ್ನು ಉದ್ದೇಶಿಸಿ ಕಾಂ. ವಿ.ಜೆ.ಕೆ. ನಾಯರ್ ಮಾತನಾಡಿ ಕಾರ್ಮಿಕರ ನಿಜವಾದ ಉದ್ಧಾರವಾಗಬೇಕಾದರೆ ಕೇವಲ ಆರ್ಥಿಕ ಬೇಡಿಕೆಯಿಂದ ಕಾರ್ಮಿಕರ ಸಮಸ್ಯೆ ಪರಿಹಾರ ಸಾಧ್ಯವಿಲ್ಲ ಶೋಷಣೆ ಕೊನೆಗೊಂಡಾಗ ಮಾತ್ರ ಸಾಧ್ಯ ಈ ಬಗ್ಗೆ ಕಾರ್ಮಿಕರು ಜಾಗೃತರಾಗಬೇಕು ಎಂದರು.

ಅಲ್ಲದೆ ಹೊಸದಾಗಿ ಚುನಾವಣೆ ನಡೆದು ಫ್ಯಾಕ್ಟರಿ ಕಮಿಟಿಗೆ ಕಾಂ. ಮುನಿರಾಜು, ಕಾಂ.ಮೂರ್ತಿ ಕಾಂ. ಶಾಮಣ್ಣ, ಮತ್ತು ಕಾಂ.ಗೋವಿಂದಪ್ಪ ಚುನಾಯಿತರಾದರು.

●

ಎಲ್ಲೆಂದು ನೆಲೆಸೋಣ? ಯಾರನ್ನು ನಂಬೋಣ?

ನಂಜನಗೂಡು ತಾಲ್ಲೂಕು ತಗಡೂರು ಗ್ರಾಮದ ಹರಿಜನ ಜನಾಂಗದಲ್ಲಿ ಸುಮಾರು ಎರಡು ಸಾವಿರ ಜನರಿದ್ದು ಸುಮಾರು 200 ಸಂಸಾರಗಳಿಗೆ ವಾಸಿಸಲು ಮನೆಯಿಲ್ಲದೆ ಬೇರೆಯವರ ಜಗಲಿಯ ಮೇಲೆ ಮತ್ತು ಇರುವ 5-6 ಅಡಿ ಸ್ಥಳದಲ್ಲೆ ಮುದುರಿಕೊಂಡು ಮಲಗಿ ರಾತ್ರಿಯ ಕಾಲವನ್ನು ಬಹಳ ಕಷ್ಟದಿಂದ ಕಳೆಯುತ್ತಾ ಬರುತ್ತಿರುತ್ತೇವೆ. ಈ ಬಗ್ಗೆ ಮಿರ್ಜಾ ಇಸ್ಮಾಯಿಲ್‌ರವರ ಕಾಲದಿಂದಲೂ ಅಂದರೆ 39 ವರ್ಷಗಳಿಂದಲೂ ಮನೆ ಕಟ್ಟಿಕೊಳ್ಳಲು ಜಾಗ ಮಂಜೂರು ಮಾಡಿಕೊಡಬೇಕೆಂದು ಕೋರಿದ್ದು ಪ್ರಯತ್ನಿಸಿದ್ದು ಈವರೆಗೂ ನಮ್ಮ ಪ್ರಯತ್ನವು ಫಲಿಸದೆ ಉದಾಸೀನವಾಗಿ ಬಿದ್ದಿರುತ್ತದೆ. ನಾವು ಎಲ್ಲರಿಗೂ ಅರ್ಜಿ ಕೊಟ್ಟು ಸುಸ್ತಾಗಿದ್ದೇವೆ ಎಂಬುದು ಕಳೆದ ತಿಂಗಳಿಂದ ಸೈಟಿಗಾಗಿ ಹೋರಾಟಕ್ಕಿಳಿದಿರುವ ತಗಡೂರಿನ ಹರಿಜನರ ಅಸಹನೆಯ ಮಾತುಗಳು.

ಹಿಂದೆ ಮಂತ್ರಿಗಳಾಗಿದ್ದ ಎನ್. ರಾಚಯ್ಯನವರಾದಿಯಾಗಿ ಮುಖ್ಯಮಂತ್ರಿ ದೇವರಾಜ ಅರಸು, ಕಂದಾಯ ಸಚಿವ ಬಸವಲಿಂಗಪ್ಪ, ಸ್ಪೀಕರ್ ವೆಂಕಟರಮಣ, ರೇಷ್ಮೆ ಸಚಿವ ಕೆ. ಬಿ. ಶಿವಯ್ಯ, ನಮ್ಮೂರಿನ ಮುಖಂಡ ಟಿ.ವಿ. ಶ್ರೀನಿವಾಸರಾವ್, ತಾಲ್ಲೂಕ್ ಬೋರ್ಡ್ ಅಧ್ಯಕ್ಷ ಪ್ರಸನ್ನಕುಮಾರ್ ಇತ್ಯಾದಿ ಇತ್ಯಾದಿ ಪ್ರಮುಖರನ್ನು ಕಂಡು ಕಂಡು ಕೇಳಿ ಕೇಳಿ ಎಲ್ಲರ ಆಶ್ವಾಸನೆಗಳು ನಮ್ಮ ಮೇಲಿದ್ದೂ ಕೂಡ ನಮ್ಮ ಕೆಲಸ ಆಗದೆ ನಿಂತಿದೆ. ಒಂದು ಸಲ ನಮ್ಮ ಸೈಟಿಗಾಗಿ ಮಂಜೂರಾದ ಜಾಗವು ಹೈಸ್ಕೂಲ್ ಕಟ್ಟಡಕ್ಕೆ ಬೇಕೆಂದು ತಡೆಯಾಯ್ತು. ಇನ್ನೊಂದು ಸಲ ಮಂಜೂರಾದ ಜಾಗವು ಜಾತ್ರೆ ಮಾಳಕ್ಕೆ ಬೇಕೆಂದು ತಡೆಯಾಯಿತು.

ರಾತ್ರೋ ರಾತ್ರಿ ಕಪ್ಪುಕಲ್ಲು:

ಈಗ ಮಂಜೂರಾಗಿರುವ ಭೂಮಿಗೆ ಒಂದು ಕಡೆ ತಾಲ್ಲೂಕು ಬೋರ್ಡ್ ಉಪಾಧ್ಯಕ್ಷ ಟಿ. ಎಸ್. ನಾಗರಾಜ್‌ರು ತಾವು ಹರಿಜನರಿಂದ ಕೊಂಡುಕೊಂಡ ಭೂಮಿಗೇ ಸ್ಟೇ ತಂದಿದ್ದರೆ, ಇನ್ನೊಂದು ಕಡೆ ಮೇಸ್ತ್ರು ಗುರುಮಲ್ಲಪ್ಪ, ದಳಪತಿ ಬಸವರಾಜ್ ಅದೇ ಮೇಲ್ಕಂಡ ಟಿ. ಎಸ್. ನಾಗರಾಜ್‌ರು ಕೈವಾಡ ಮಾಡಿ ನಮಗಾಗಿರುವ ಸೈಟು ಜಾಗದಲ್ಲಿ ರಾತ್ರೋರಾತ್ರಿ ಕಪ್ಪು ಕಲ್ಲು ನೆಟ್ಟು ದೇವರು ಒಡಮೂಡಿರುವನೆಂದು ಚಪ್ಪರ ಹಾಕಿ ಮೆರವಣಿಗೆ ನಡೆಸಿ ಒಬ್ಬನ ಮೈಮೇಲೆ 'ದೇವರನ್ನೂ ಬರಿಸಿ' ಈ ಜಾಗಕ್ಕೆ ಹರಿಜನರು ಬರಕೂಡದೆಂದು ಹೇಳಿಸಿ ಅಲ್ಲೊಂದು ದೇವಸ್ಥಾನ ಕಟ್ಟಿಸುವ ಪ್ರಯತ್ನ ನಡೆಸಿದ್ದು ಅಧಿಕಾರಿಗಳ ಕ್ರಮದಿಂದ ಅದೇನೊ ಅಷ್ಟಕ್ಕೆ ನಿಂತಿತು.

ಆದರೆ ದೇವರಾಧಿಯಾಗಿ ಎಲ್ಲ ಮನುಷ್ಯರೂ ನಮ್ಮನ್ನು ವಂಚಿಸುತ್ತಲೆ ಬಂದಿದ್ದಾರೆ. ಆಫೀಸುಗಳಲ್ಲಿ ನಮ್ಮ ಸೈಟು ಸಂಬಂಧದ ಫೈಲುಗಳೇ ನಾಪತ್ತೆಯಾಗಿವೆ. ಒಟ್ಟಿನಲ್ಲಿ ನಾನಾ ಕಡೆಗಳಿಂದಲೂ ನಮಗೆ ವಂಚನೆಗಳಾಗುತ್ತಿರುವುದರಿಂದ ಕೊನೆಗೆ ಸತ್ತ ಮೇಲಾದರೂ 6 ಅಡಿ 3 ಅಡಿ ಆಳತೆ ಮಟ್ಟ ಜಾಗವಾದರೂ ನಮ್ಮ ಶವಗಳನ್ನು ಹೂಳಲು ಯಾವ ತಂಟೆ ತಕರಾರಿಗೆ ಬರುವುದಿಲ್ಲವೆಂದು ತಿಳಿದು ದಿನಾಂಕ: 17-10-79 ರಿಂದ ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದೇವೆ.

ಕೊಟ್ಟ ಮಾತು ನಡೆಯಲಿಲ್ಲ:

ಕನ್ನಡ ರಾಜ್ಯೋತ್ಸವದಂದು ಭೇಟಿ ನೀಡಿದ ಸ್ಪೀಕರ್ ವೆಂಕಟರಮಣ, ಸಚಿವ ಕೆ. ಬಿ. ಶಿವಯ್ಯನವರು ಇನ್ನೊಂದು ವಾರದೊಳಗಾಗಿ ಮಾಡಿಕೊಡುವುದಾಗಿ ಮಾತುಕೊಟ್ಟರು. ಮಾತು ನಡೆಯಲಿಲ್ಲ. ವಾರ ನಮ್ಮ ಕಣ್ಣೆದುರೇ ನಮ್ಮನ್ನು ಗೇಲಿಮಾಡುತ್ತಾ ಕಳೆದುಹೋಯಿತು. ಜಿಲ್ಲಾಧಿಕಾರಿಗಳಾದ ಶ್ರೀ ಎಸ್. ಆರ್. ವಿಜಯ್‌ರವರು ಡಿಸೆಂಬರ್ 15ರ ಒಳಗಾಗಿ ಮಾಡಿಕೊಡುವುದಾಗಿಮಾತು ಕೊಟ್ಟಿರುವರು. ಇನ್ನೂ ಕಾಲವಿರುವುದರಿಂದ ಈ ಮಾತಾದರೂ ನಡೆಯಬಹುದೆಂದು ಆಸೆ ಇಟ್ಟುಕೊಂಡು ಕುಳಿತಿದ್ದೇವೆ.

ರಾಜ್ಯಕ್ಕೆ ನಾಯಕರಾದವರು ನಮ್ಮ ತಾಲ್ಲೂಕಿನಲ್ಲೆ ಇರುವುದರಿಂದ ಅವರೆಲ್ಲ ಮನಸ್ಸುಪಟ್ಟರೆ ಇಂದೇ ಈ ಕೆಲಸವಾಗಬಹುದು. ಈ ಆಸೆಯೂ ನಮಗೆ ಇನ್ನೂ ಉಳಿದಿದೆ. ಜೊತೆಗೆ ನಮ್ಮ ಗೋಳು ಸಂಕಟಗಳು ಮುಖ್ಯಮಂತ್ರಿಗಳನ್ನು ಮುಟ್ಟಿ ಅವರು ಮನಸ್ಸು ಮಾಡಿ ನಮ್ಮಂಥ ವಂಚಿತ ಜನರ ಸಲುವಾಗಿ ಸುಗ್ರೀವಾಜ್ಞೆ ತರಬಹುದೆಂಬ ಆಸೆಯೂ ನಮಗಿದೆ.

ಚಳುವಳಿ ವಿಸ್ತರಣೆ:

ಆದ್ದರಿಂದ ಎಲ್ಲರ ಕಣ್ಣುಗಳನ್ನೂ ಈ ಕಡೆ ತಿರುಗಿಸುವ ಸಲುವಾಗಿ ಆಮರಣಾಂತ ಉಪವಾಸ ಸತ್ಯಾಗ್ರಹ; ಜಿ. ಎಸ್. ನಾಗರಾಜ್‌ರವರ ಮನೆ ಹೊರಗೆ, ಒಳಗೆ ಶಾಂತಿಯುತ ಸತ್ಯಾಗ್ರಹ; ಹಾಗೂ ಕೆ. ಬಿ. ಶಿವಯ್ಯ ವೆಂಕಟರಮಣರವರ ಮನೆಗಳ ಮುಂದಕ್ಕೆ ವಸತಿಹೀನರ ಚಳುವಳಿಯನ್ನು ಹಂತಹಂತವಾಗಿ ವಿಸ್ತರಿಸುವೆವು. ಈಗ ನಮ್ಮ ಬೆನ್ನೆಲುಬಾಗಿ ದಲಿತ ಸಂಘರ್ಷ ಸಮಿತಿಯಿದೆ. ಜೊತೆಗೆ ಇದಕ್ಕೆ ರಾಜ್ಯದ ಪ್ರಗತಿಪರ ಪಕ್ಷಗಳು, ವ್ಯಕ್ತಿಗಳು, ನೊಂದವರು, ಎಲ್ಲರೂ ಪ್ರತಿಕ್ರಿಯೆ ವ್ಯಕ್ತಪಡಿಸಿ ಕೈಲಾದಂತೆ ಪಾಲ್ಗೊಳ್ಳಬೇಕೆಂದು ತಗಡೂರಿನ ಅಂಬೇಡ್ಕರ್ ಯುವಕಸಂಘದ ಅಧ್ಯಕ್ಷ ಶ್ರೀಕೂಸಯ್ಯ ವಿನಂತಿಸಿದ್ದಾರೆ.

●

ಸೌಹಾರ್ದ ಬೆಂಬಲ

ದಿನಾಂಕ 5-11-79 ರಂದು ಯಶವಂತಪುರ ಸಿ.ಐ.ಟಿ.ಯು. ಆಫೀಸಿನಲ್ಲಿ ಯಶವಂತಪುರ, ಪೀಣ್ಯ ಸಿ.ಐ.ಟಿ.ಯು. ಸಂಘಗಳ ಸಭೆ ಕಾಂ. ವಿ.ಪಿ.ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಸೇರಿ ಕೆಳಕಂಡ ನಿರ್ಣಯವನ್ನು ಕೈಗೊಳ್ಳಲಾಯಿತು.

ಸುಮಾರು ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ, ಬಹುದೇಶೀಯ ಕಂಪೆನಿಯಾದ ಮೈಕೋ ಕಾರ್ಮಿಕರು ಕೆಲವು ನ್ಯಾಯಬದ್ಧ ಬೇಡಿಕೆಗಳಿಗಾಗಿ ವೀರೋಚಿತ ಹೋರಾಟ ನಡೆಸುತ್ತಿರುವುದನ್ನು ಗಮನಿಸಿ ಮೈಕೋ ಕಾರ್ಮಿಕರ ಹೋರಾಟಕ್ಕೆ ಎಲ್ಲ ತರದ ಸಹಕಾರ ಕೊಡಬೇಕೆಂದೂ, ಮೈಕೋ ಕಾರ್ಮಿಕ ಸಂಘದಅಧ್ಯಕ್ಷಕಾಂ.ಸೂರ್ಯನಾರಾಯಣ ರಾವ್‌ರ ಮನೆಯ ಮೇಲೆ ಆಡಳಿತ ವರ್ಗದ ಗೂಂಡಾಗಳು ದಾಳಿ ಮಾಡಿ ಕೊಲೆಬೆದರಿಕೆ ಹಾಕಿದ್ದನ್ನು ಖಂಡಿಸುವ ನಿರ್ಣಯ ಸ್ವೀಕರಿಸಲಾಯಿತು.

ಮೈಕೋ ಕಾರ್ಮಿಕರ ಹೋರಾಟಕ್ಕೆ ರಚಿತವಾದ ಸೌಹಾರ್ದತಾ ಸಮಿತಿ ಕರೆಕೊಟ್ಟಮೇರೆಗೆ ದಿನಾಂಕ7-11-79 ರಂದು ಕಬ್ಬನ್‌ಪಾರ್ಕಿನಲ್ಲಿ ನಡೆಯಲಿರುವ ನಗರದ ಎಲ್ಲ ಕಾರ್ಮಿಕರ ಬೃಹತ್ ಸಭೆಗೆ ಯಶವಂತಪುರದಿಂದ ಮೆರವಣಿಗೆ ಹೊರಡಿಸುವ ತೀರ್ಮಾನ ಕೈಗೊಳ್ಳಲಾಯಿತು.

ಮೇಲ್ಕಂಡ ತೀರ್ಮಾನದ ಪ್ರಕಾರ ದಿನಾಂಕ 7-11-79 ರಂದು ಯಶವಂತಪುರ ಪ್ರದೇಶಕ್ಕೆ ಸೇರಿದ ನೂರಾರು ಕಾರ್ಮಿಕರು ಕೆಂಬಾವುಟಗಳನ್ನು ಹಿಡಿದು, ಮೈಕೋಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ ಘೋಷಣೆಗಳನ್ನು ಕೂಗುತ್ತಾ, ಕಬ್ಬನ್‌ಪಾರ್ಕಿನಲ್ಲಿ ವ್ಯವಸ್ಥೆ ಮಾಡಿದ್ದ ಸೌಹಾರ್ದ ಸಮಿತಿ ಸಭೆಗೆ ತೆರಳಿದರು. ○

ಸ್ಮಾರಕ ರಚಿಸಲು ನಿರ್ಧಾರ

ಮಂಗಳೂರು ಅಳಪೆ ಪಂಚಾಯತಿನ ಸಾಮಾನ್ಯ ಸಭೆಯು ತಾ.29 ರಂದು ಸಭಾಪತಿ ಶ್ರೀ ಎ. ವೆಂಕಪ್ಪಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಭೆಯು ದಿ. ಲೋಕನಾಯಕ ಜಯಪ್ರಕಾಶನಾರಾಯಣಮತ್ತು ಅಳಪೆ ಗ್ರಾಮದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ದಿ. ಬಿ. ಸಂಕಪ್ಪರೈಯವರ ನಿಧನದ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಲಾಯಿತು.

ಪಂಚಾಯತಿನ ಉಪಸಭಾಪತಿಯವರಾದ ಶ್ರೀ ಕೆ. ನಾರಾಯಣರವರು ಮೃತರು ದೇಶಕ್ಕಾಗಿ ಮಾಡಿದ ತ್ಯಾಗಗಳ ಬಗ್ಗೆ ಮಾತನಾಡಿದರು.

ದಿ. ಬಿ. ಸಂಕಪ್ಪರೈಯವರ ಸ್ಮಾರಕಾರ್ಥವಾಗಿ ಪಡೀಲ್‌ನಲ್ಲಿ ದಿ. ಬಿ. ಸಂಕಪ್ಪರೈ ಸ್ಮಾರಕ ವೃತ್ತವನ್ನು ನಿರ್ಮಿಸುವರೆ ಸರ್ವಾನುಮತದಿಂದ ನಿರ್ಣಯ ಒಂದನ್ನು ಅಂಗೀಕರಿಸಲಾಯಿತು. ○

ಸಹಾಯಕ ಶುಶ್ರೂಷಣಾ ದಾದಿಯರ ಸಭೆ

ತಾರೀಕು 3.11.79 ರಂದು ದ.ಕ.ಜಿಲ್ಲೆ ಪೂಂಜಾಲಕಟ್ಟೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಹಾಯಕ ಶುಶ್ರೂಷಣಾ ದಾದಿಯರ ಸಭೆಸೇರಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ. ಸೀತಾ ಅವರು ವಹಿಸಿದ್ದರು. ಕರ್ನಾಟಕ ರಾಜ್ಯಾದ್ಯಂತ ಅಸಂಘಟಿತರಾಗಿ ರಾತ್ರಿ ಹಗಲೆನ್ನದೆ ಜನರ ಸೇವೆಯಲ್ಲಿ ನಿರತರಾಗಿರುವ ಈ ವರ್ಗದ ಸಹೋದರಿಯರ ಸಮಸ್ಯೆಗಳು ಹಲವಾರು. ಒಂದು ಕಡೆ ಅಧಿಕಾರಿಗಳಿಂದ ಕಿರುಕುಳ, ಹಳ್ಳಿಯಲ್ಲಿ ಪ್ರಭಾವಿತ ಶಕ್ತಿಗಳ ಉಪದ್ರ ಇವುಗಳ ಮಧ್ಯೆ ತೊಳಲಾಡುವ ಇವರಿಗೆ ತಮ್ಮದೇ ಆದ ಸ್ವತಂತ್ರ ಸಂಘಟನೆ ಇರಲಿಲ್ಲ.

ತಮ್ಮ ಹಲವಾರು ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟನೆ ಅತೀ ಅಗತ್ಯವೆಂದು ಮನಗಂಡು, ಈ ಸಭೆಯು ತಮ್ಮ ಮುಂದಿನ ಹೋರಾಟಕ್ಕಾಗಿ ಈ ಕೆಳಗಿನವರನ್ನು ಸರ್ವಾನುಮತದಿಂದ ಪದಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಅಧ್ಯಕ್ಷೆ:- ಎ. ಸೀತಾ, ಉಪಾಧ್ಯಕ್ಷೆ :- ಮಿತ್ರಮ್ಮ. ಕಾರ್ಯದರ್ಶಿ:- ಲಲಿತರೈ, ಉಪಕಾರ್ಯದರ್ಶಿ:- ಚಂದ್ರಮ್ಮ, ಕೋಶಾಧಿಕಾರಿ :- ಇಂದಿರಮ್ಮ. ಉಪಕೋಶಾಧಿಕಾರಿ:- ಸರಸ್ವತಿ. ಸಂಘಟನಾ ಕಾರ್ಯದರ್ಶಿಗಳು: 1.ಭವಾನಿಶಂಕರಿ 2.ಇಂದುಮತಿ 3.ಮೀರಾ. ಮತ್ತು ಹದಿನೇಳು ಜನರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಶ್ರೀಮತಿ ಲಲಿತರೈ ಅವರು ಆರಂಭದಲ್ಲಿ ಸ್ವಾಗತಿಸಿದರು. ಚಂದ್ರಮ್ಮನವರು ಧನ್ಯವಾದ ಸಮರ್ಪಿಸಿದರು. ○

ಇನವಳ್ಳಿ ಶಂಕರ ಬಲ್ಯಾಯರು ಇನ್ನಿಲ್ಲ

ಶ್ರೀಯುತರು ತಾ.10.11.79 ರಂದು ಪಾವೂರು ಕಂಬಳ ಪದವಿನ ಸ್ವಗೃಹದಲ್ಲಿ ತಮ್ಮ 83ನೇ ವಯಸ್ಸಿನಲ್ಲಿ ಸ್ವಲ್ಪಕಾಲದ ಅಸ್ವಸ್ಥ್ಯದಿಂದ ನಿಧನರಾಗಿರುತ್ತಾರೆ. ಇವರು ಸುಪ್ರಸಿದ್ಧ ಆಯುರ್ವೇದ ವೈದ್ಯರಾಗಿದ್ದು ಎಷ್ಟೋ ಬಡಜನರಿಗೆ ಧರ್ಮಾರ್ಥವಾಗಿ ಚಿಕಿತ್ಸೆ ನಡೆಸಿರುತ್ತಾರೆ. ಸ್ವತಃ ಶ್ರೀಮಂತರಲ್ಲದ ಇವರ ಔದಾರ್ಯ ಚಿರಸ್ಮರಣೀಯವಾಗಿರುತ್ತದೆ. ಸಿ.ಪಿ.ಐ(ಎಂ) ಪಕ್ಷದ ಮೇಲೆ ಅತ್ಯಂತ ಅಭಿಮಾನ, ಆದರ ಗೌರವವುಳ್ಳ ಇವರ ನಿಧನವು ಸ್ಥಳೀಯ ಕಾರ್ಮಿಕ ಹಾಗೂ ರೈತ ಬಂಧುಗಳ ಹೃದಯಕ್ಕೆ ಆಘಾತವನ್ನುಂಟುಮಾಡಿರುತ್ತದೆ. ತಾ. 11.11.79 ರಂದು ಸ್ಥಳೀಯ ಯುವಕ ಮಂಡಲವು ಸಂತಾಪಸೂಚಕ ಸಭೆ ಸೇರಿ ಶ್ರೀಯುತರ ಕುಟುಂಬಕ್ಕೆ ದುಃಖವನ್ನು ಸಹಿಸುವಶಕ್ತಿ ಬರಲೆಂದು ಹಾರೈಸಲಾಯಿತು. ○

ಬೀಡಿ ಕಾರ್ಮಿಕರ ಸಭೆ

ದ. ಕ. ಜಿಲ್ಲೆ, ಪುತ್ತೂರು ತಾಲ್ಲೂಕು ಬಜತ್ತೂರು ಗ್ರಾಮದ ವಳಲು ಎಂಬಲ್ಲಿ ತಾ. 10.11.79 ರಂದುಬೀಡಿಕಾರ್ಮಿಕರ ಸಭೆ ಜರಗಿತು. ಅಧ್ಯಕ್ಷತೆಯನ್ನು ಪುತ್ತೂರು ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ವಿಷ್ಣುಮೂರ್ತಿಯವರು ವಹಿಸಿದ್ದು ಮುಖ್ಯ ಅತಿಥಿಗಳಾಗಿ ದಲಿತ ಕಾರ್ಮಿಕ ಮುಂದಾಳು ಕಾಂ. ಬಿ. ರಾಮಕೃಷ್ಣ ಅವರು ಉಪಸ್ಥಿತರಿದ್ದರು

ಮುಖ್ಯ ಅತಿಥಿಗಳು ಮಾತನಾಡಿ ಕೇವಲ ಪೇಟೆ ಸರಹದ್ದಿನಲ್ಲಿದ್ದ ಬೀಡಿ ಉದ್ದಿಮೆಯು ಹಳ್ಳಿ ಹಳ್ಳಿಗೂ ವಿಸ್ತರಿಸಿದೆ. ಯಾಕೆಂದರೆ. ಪೇಟೆಯಲ್ಲಿರುವ ಬೀಡಿ ಕಾರ್ಮಿಕರು ಸಂಘಟಿತರಾಗಿ ಹೆಚ್ಚು ಮಜೂರಿ, ರಜೆ ಸಂಬಳ ಬೋನಸ್ಸು ಇತ್ಯಾದಿ ಸೌಲಭ್ಯಗಳನ್ನು ಸತ್ಯಾಗ್ರಹಮಾಡಿ ಪಡೆಯಲು ಸಮರ್ಥರಾಗುತ್ತಾರೆ. ಸಂಘಟಿತ ಕಾರ್ಮಿಕರ ಹೋರಾಟವನ್ನು ಮುರಿಯಲು, ಸಂಘಟನೆಯನ್ನು ನಾಶಮಾಡಲು, ಮಾಲಕರು ಅಸಂಘಟಿತ ಕಾರ್ಮಿಕರಿರುವ ಹಳ್ಳಿಗೆ ತಮ್ಮ ದಳ್ಳಾಳಿಗಳ ಮೂಲಕ ಬೀಡಿ ಕೈಗಾರಿಕೆಯನ್ನು ಹಬ್ಬಿಸಿರುತ್ತಾರೆ. ಇದರಿಂದ ಪೇಟೆಯಲ್ಲಿರುವ ಕಾರ್ಮಿಕರಿಗೆ ವಾರದ ಕೆಲವೇ ದಿನಗಳಲ್ಲಿ ಕೆಲಸ ದೊರೆತು ಕಷ್ಟಕ್ಕೊಳಗಾಗಿರುವ ಪ್ರಕರಣಗಳು ಹಲವಾರು. ಹಳ್ಳಿಯಕಾರ್ಮಿಕರಿಗೆ ಬೀಡಿಕೈಗಾರಿಕೆಯ ಕಾನೂನಾಗಲೀ ತಮಗೆ ಸಿಗುವ ಸೌಲಭ್ಯಗಳನ್ನು ಪಡೆದುಕೊಳ್ಳುವ ಸಂಘಟನೆಯಾಗಲೀ ಇಲ್ಲದೇ ಕಂಟ್ರಾಕ್ಟುದಾರ ಮತ್ತು ಬೀಡಿ ಮಾಲಕ ಇಬ್ಬರಿಂದಲೂ ಶೋಷಣೆಗೊಳಗಾಗಿದ್ದಾರೆ. ಇಂತಹ ಕ್ರೂರ ಪದ್ಧತಿ ಕೊನೆಗೊಳ್ಳಬೇಕಾದರೆ ಪೇಟೆಯಿಂದ ಹಿಡಿದು ಹಳ್ಳಿಯ ವರೆಗಿನ ರೈತ ಕಾರ್ಮಿಕರು ಸಂಘಟನೆಯಾಗಿ ಹೋರಾಟ ನಡೆಸಬೇಕು.

ಅಧ್ಯಕ್ಷ ಸ್ಥಾನದಿಂದ ಮಾತನಾಡಿ ಕಾಂ. ವಿಷ್ಣುಮೂರ್ತಿಯವರು ಬೀಡಿ ಕೈಗಾರಿಕೆಯ ಕಾನೂನು ಜಾರಿಯಾಗಲು ಕಾರ್ಮಿಕರು ನಡೆಸಿದ ಹೋರಾಟದ ಫಲವಾಗಿದೆ ಎಂದು ತಿಳಿಸಿದರು. ಪ್ರೊವಿಡೆಂಟ್ ಫಂಡ್‌ಗೆ ಸರಿಯಾದ ಲೆಕ್ಕವಿಲ್ಲ. ಇಚ್ಛಾನುಸಾರ ಎಲೆಯ ಎವರೇಜ್ ಹಾಕುವುದು, ಬೋನಸ್ ರಜೆ ಸಂಬಳವನ್ನು ಕೊಡದಿರುವಂತ ಮೋಸ. ಇವುಗಳು ಕೊನೆಗೊಳ್ಳಬೇಕಾದರೆ, ಕಾರ್ಮಿಕರು ಸಂಘಟನೆಯನ್ನು ಕಟ್ಟಿ ಹೋರಾಟ ನಡೆಸಿದರೆ ಮಾತ್ರ ಸಾಧ್ಯ ಎಂದು ತಿಳಿಸಿದರು. ಕಾಂ. ಬಾಬುಗೌಡ ಕಾರ್ಯದರ್ಶಿಯಾಗಿರುವ ಏಳು ಜನರ ಸಮಿತಿಯನ್ನು ರಚಿಸಲಾಯಿತು. ಕಾಂ. ಸುಬ್ಬನವರು ಧನ್ಯವಾದ ಅರ್ಪಿಸಿದರು. ●

ಜ್ವರ ತಡೆಗೆ ತಕ್ಷಣ ಕ್ರಮಕ್ಕೆ ಒತ್ತಾಯ

ಮಿದುಳು ಜ್ವರವು ಕೋಲಾರ ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಈಗಾಗಲೇ ಹರಡಿದ್ದು, ಸಾಕಷ್ಟು ಜನ ಸಾವಿಗೆ ಈಡಾಗಿರುವುದಾಗಿ ಪತ್ರಿಕೆಗಳಲ್ಲಿ ಬಂದಿದೆ. ಶಿಡ್ಲಘಟ್ಟದಲ್ಲೂ ಮೂವರು ಈ ವ್ಯಾಧಿಗೆ ಗುರಿಯಾಗಿರುವುದಾಗಿ ಸುದ್ದಿ ಇದೆ.

ಹಂದಿಗಳಲ್ಲಿರುವ ಬ್ಯಾಕ್ಟೀರಿಯಗಳು ಸೊಳ್ಳೆಗಳ ಮೂಲಕ ಈ ವ್ಯಾಧಿ ಮನುಷ್ಯರಿಗೆ ಹಬ್ಬುತ್ತದೆ, ಈ ವ್ಯಾಧಿಯನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮ ಅವಶ್ಯಕವೆಂದು ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳಿಕೆಗಳು ನೀಡಿರುತ್ತಾರೆ.

ಆದರೆ ನಮ್ಮ ಟೌನಿನಲ್ಲಿ ಈ ಬಗ್ಗೆ ಮುಂಜಾಗ್ರತೆಕ್ರಮವಹಿಸದೆ ಇರುವುದು ದುರಾದೃಷ್ಟಕರವೆಂದು, ತಾಲ್ಲೂಕು ಸಿ.ಪಿ.ಐ.(ಎಂ) ಕಾರ್ಯದರ್ಶಿ ಜೆ.ದೊರೆಸ್ವಾಮಿಯವರು ಇಂದು ಪುರಸಭೆಯ ಅಧ್ಯಕ್ಷರನ್ನು ಭೇಟಿಯಾಗಿ ಹೇಳಿ ಈಬಗ್ಗೆ ಕೂಡಲೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದರಲ್ಲದೆ ಸಾರ್ವಜನಿಕರು ಬರೆದುಕೊಂಡ ಮನವಿ ಪತ್ರವನ್ನು ಸಲ್ಲಿಸಿದರು. ○

ಬೆಂಗಳೂರು ಸಾಫ್ಟ್ ಡ್ರಿಂಕ್ಸ್ (ಟೊರಿನೋ) ಕಾರ್ಮಿಕರ ಹೋರಾಟ

ಬೆಂಗಳೂರು ನಗರದ, ಮೈಸೂರು ರಸ್ತೆಯಲ್ಲಿರುವ ಬೆಂಗಳೂರು ಸಾಫ್ಟ್ ಡ್ರಿಂಕ್ಸ್ ಕಾರ್ಖಾನೆ ನೌಕರರು ಮಾಲೀಕರ ದುಂಡಾವರ್ತಿಯನ್ನು ಪ್ರತಿಭಟಿಸಿ ತಾ. 14.9.79 ರಿಂದ ಹೋರಾಟ ನಡೆಸುತ್ತಿದ್ದರು. ಕಾರ್ಖಾನೆಯ 79ಜನ ಕಾರ್ಮಿಕರನ್ನು ಹಾಗೂ ವಾಹನ ಚಾಲಕರನ್ನು ದಿನಗೂಲಿ ಕೆಲಸಗಾರರೆಂಬ ನೆಪದ ಮೇಲೆ, ಲೇಆಫ್ ತಂದು ಬೀದಿಗೆ ಹಾಕಿದ್ದರು. ಇದನ್ನು ಎಲ್ಲಾ ಕಾರ್ಮಿಕರು ಒಗ್ಗಟ್ಟಿನಿಂದ ಪ್ರತಿಭಟಿಸಿದಾಗ, ನ್ಯಾಯಾಲಯದಿಂದ ತಡೆಯಾಜ್ಞೆ ತಂದರು. ಆದರೂ ಕಾರ್ಮಿಕರು, ಕಾರ್ಖಾನೆಯ ದ್ವಾರವನ್ನು ಬಿಟ್ಟು ಕದಲಲಿಲ್ಲ. ಪೋಲೀಸರನ್ನು ಕರೆಸಿ ಹೆದರಿಸಲು ಸಹಾ ಮಾಲಿಕರು ಪ್ರಯತ್ನಿಸಿದರು, ಈಯಾವ ಅಡ್ಡಿ, ಆತಂಕಗಳಿಗೂ ಹೆದರದೆ ಮುಷ್ಕರ ಮುಂದುವರಿದ ಪರಿಣಾಮ ತಾ. 15.11.79 ರಂದು ಮಾಲೀಕರು ಸಂಘದ ಜೊತೆ ಒಪ್ಪಂದ ಮಾಡಿಕೊಂಡರು. ಕಾರ್ಮಿಕರು 16.11.79 ರಂದು ಬೆಳಿಗ್ಗೆ ಸಭೆ ಸೇರಿ ಒಪ್ಪಂದವನ್ನು ಸ್ವಾಗತಿಸಿ, ಮುಷ್ಕರವನ್ನು ನಿಲ್ಲಿಸಿದರು. ಹೋರಾಟದಲ್ಲಿ ಎಲ್ಲಾ ರೀತಿಯ ಸಹಾಯ ಮಾಡಿದ ಸಂಘ, ಸಂಸ್ಥೆಗಳಿಗೆ ಹಾಗೂ ಹಿತೈಷಿಗಳಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಸಭೆಯಲ್ಲಿ, ಹೋರಾಟದಲ್ಲಿರುವ ಮೈಕೋ ಕಾರ್ಮಿಕರಿಗೆ ಹಾಗೂ ತಾತಗುಣಿ ಎಸ್ಟೇಟ್ ಕಾರ್ಮಿಕರಿಗೆ ಬೆಂಬಲ ವ್ಯಕ್ತಪಡಿಸಲಾಯಿತಲ್ಲದೆ, ಮ್ಯಾನೇಜ್‌ಮೆಂಟ್ ಪರ ಗೂಂಡಾಗಳು ಮೈಕೋ ಕಾರ್ಮಿಕರ ಸಂಘದ ಅಧ್ಯಕ್ಷ ಕಾ.ಸೂರ್ಯನಾರಾಯಣರಾವ್ ಮನೆಯ ಮೇಲೆ ದಾಳಿ ನಡೆಸಿದ್ದನ್ನು ಖಂಡಿಸಲಾಯಿತು. ಪೋಲೀಸರು ಮುಷ್ಕರ ಮುರಿಯಲು ಯತ್ನಿಸುತ್ತಿದ್ದಾರೆಂದೂ ಸಹಾ ಟೀಕಿಸಲಾಯಿತು. ○

ಯುವಕ ಮಂಡಳಿ ಉದ್ಘಾಟನೆ

ದ. ಕ. ಕುಂದಾಪುರ ತಾಲ್ಲೋಕಿನ ವಡೇರ ಹೋಬಳಿಯ ಬೆಟ್ಟಾಗರ ಎಂಬಲ್ಲಿ ತಾರೀಖು 10-11-79ರಂದು ಕಾಂ. ಕೆ. ಶಂಕರನವರ ಅಧ್ಯಕ್ಷತೆಯಲ್ಲಿ ಯುವಕರ ಸಭೆ ಸೇರಿತು. ಪ್ರಾರಂಭದಲ್ಲಿ ತಾಲ್ಲೂಕ್ ಯುವಕರ ಕಾರ್ಯದರ್ಶಿ ಕಾಂ. ಪಿ. ಮಹಾಬಲ ದೇವಾಡಿಗ, ಸಭೆಗೆ ಬಂದವರನ್ನು ಸ್ವಾಗತಿಸುತ್ತಾ ಯುವಕ ಮಂಡಳಿಯ ಧ್ಯೇಯ ಧೋರಣೆಯನ್ನು ವಿವರಿಸಿದರು.

ನಂತರ ಸಮಿತಿಯನ್ನು ರಚಿಸಿ 1. ಗೋಪಾಲ ಮೆಂಡನ್ - ಅಧ್ಯಕ್ಷ 2. ಗಣೇಶ್‌ಕಾರಂತ-ಉಪಾಧ್ಯಕ್ಷ 3. ಶೇಖರ-ಕಾರ್ಯದರ್ಶಿ 4. ಸುಬ್ಬಯ್ಯ-ಜೊತೆಕಾರ್ಯದರ್ಶಿ 5. ಬಸವ (ರಮೇಶ) - ಕೋಶಾಧಿಕಾರಿ 6. ಜೊಜ್ 7. ಪಾವೆರಾ 8. ಗೋಪಾಲ 9. ಬಾಬು 10. ಮಹಾಬಲ 11. ಸುಕ್ರ 12. ವಿ. ಸುಕ್ರ 13.ಗೋವಿಂದ 14. ವಿಜಯ ಕುಮಾರ್.

ಕೊನೆಯಲ್ಲಿ, ಮಂಡಳಿಯ ಅಧ್ಯಕ್ಷರಾದ ಗೋಪಾಲ ಮೆಂಡನ್‌ರವರು ಧನ್ಯವಾದ ಮಾಡಿದರು. ○

ಪೊಲಿಟ್‌ಬ್ಯೂರೋ ಹೇಳಿಕೆ

ಅಸ್ಸಾಮಿನ ಪರಿಸ್ಥಿತಿ

ಅಸ್ಸಾಂ ರಾಜ್ಯದಲ್ಲಿ ಈಚೆಗೆ ಉಂಟಾಗಿರುವ ಅಪಾಯಕಾರಿ ಪರಿಸ್ಥಿತಿಯ ಕುರಿತು ಸಿ.ಪಿ.ಐ. (ಎಂ)ನ ಪೊಲಿಟ್‌ಬ್ಯೂರೋ ತನ್ನ ತೀವ್ರ ಕಳವಳವನ್ನು ವ್ಯಕ್ತಪಡಿಸುತ್ತದೆ. ರಾಜ್ಯದ ಹಲವಾರು ನಗರಗಳಲ್ಲಿ ಗೋಲಿಬಾರು ನಡೆದಿದ್ದು ಒಂದಾದಮೇಲೊಂದು ಪಟ್ಟಣಗಳಲ್ಲಿ ಕರ್ಫ್ಯೂ ಜಾರಿಗೊಳಿಸಲಾಗಿದೆ.

'ಹೊರ ದೇಶದವರು' ಎನ್ನಲಾದವರ ವಿರುದ್ಧ ಅಸ್ಸಾಮಿನ ಜನತೆಯ ನಡುವೆ ದ್ವೇಷಮಯ ವಾತಾವರಣವನ್ನು ಉದ್ರೇಕಿಸಿಬಿಡಲಾಗಿದೆ. ಕಳೆದ ಎರಡು ಮಹಾಚುನಾವಣೆಗಳಲ್ಲಿ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿರುವ ಹತ್ತಾರು ಸಾವಿರ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕಿತ್ತುಹಾಕಬೇಕೆಂಬುದಾಗಿ ಚಳುವಳಿಗಾರರು ಮುಂದಿಟ್ಟಿರುವ ಪ್ರಮುಖ ಬೇಡಿಕೆ ಸಂಪೂರ್ಣ ಅಕ್ರಮವಾದುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಚುನಾವಣಾ ಆಯೋಗವೂ, ಸ್ಥಳೀಯ ಚುನಾವಣಾ ಅಧಿಕಾರಿಗಳೂ ಮತದಾರರ ಪಟ್ಟಿಯಿಂದ ಯಾವ ಹೆಸರನ್ನು ಕಿತ್ತುಹಾಕಬೇಕಾದರೂ ಅದನ್ನು ಈವರೆಗೂ ಜಾರಿಯಲ್ಲಿರುವ ನಿಯಮಗಳಿಗೆ ಅನುಸಾರವಾಗಿ ಮಾಡಬೇಕು ಎಂಬ ಸರಿಯಾದ ನಿಲುಮೆಯನ್ನೇ ತಳೆದಿದ್ದಾರೆ. ಈ ಕ್ರಮಬದ್ಧವಾದ ನಿಲುಮೆಯ ವಿರುದ್ಧ ಜನರ ಭಾವನೆಗಳನ್ನು ಉದ್ರೇಕಿಸಿ ಗಲಭೆಗಳನ್ನು ನಡೆಸಲಾಗುತ್ತಿದೆ.

ರಾಜ್ಯದಲ್ಲಿರುವವಪ್ರಜೆಗಳು ಅಸ್ಸಾಮಿನವರಾಗಿರಲಿ ಅಥವಾ ಅಸ್ಸಾಮೇತರರಾಗಿರಲಿ, ಅವರ ಹಕ್ಕುಗಳನ್ನು ರಕ್ಷಿಸಬೇಕಾಗಿರುವ ರಾಜ್ಯ ಸರಕಾರವು ಪ್ರಾದೇಶಿಕ ಸಂಕುಚಿತವಾದಿಗಳಿಗೇ ಅನುಕೂಲಕರವಾದ ವರ್ತನೆಯನ್ನು ತೋರಿಸುತ್ತಿರುವುದು ವಿಷಾದಕರ. ಕಾಂಗ್ರೆಸ್ (ಐ), ಆರೆಸ್ಸೆಸ್ ಮತ್ತು ಆನಂದ ಮಾರ್ಗ ಇತ್ಯಾದಿಗಳನ್ನೊಳಗೊಂಡ ಕೆಲವು ಜನತಂತ್ರ ವಿರೋಧಿ, ವಿಭಾಜಕ ಶಕ್ತಿಗಳೂ ಈವಿದ್ಯಮಾನಗಳ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯವನ್ನು ಒಡೆಯುವ ತಮ್ಮ ಆಟಕ್ಕೆ ಸಹಕಾರಿಯಾಗಿರುವ ಕಾರಣ ಅವಕ್ಕೆ ಬೆಂಬಲ ನೀಡುತ್ತಿವೆ.

ಪ್ರಾದೇಶಿಕ ಸಂಕುಚಿತವಾದಿಗಳ ವಿಚಿದ್ರಕಾರಿ ಚಟುವಟಿಕೆಯನ್ನು ಸೋಲಿಸಲೂ, ರಾಜ್ಯದಲ್ಲಿ ಶಾಂತಿಯನ್ನು ಕಾಪಾಡಿ ಎಲ್ಲ ಮತದಾರರ ಹಕ್ಕುಗಳು ಸುರಕ್ಷಿತವಾಗಿರುವಂತೆ ಮತ್ತು ಮುಕ್ತ ಮತದಾನ ನಡೆಯಲು ಅನುಕೂಲವಾಗುವಂತೆಯೂ ರಾಜ್ಯದ ಒಳಗೂ ಹೊರಗೂ ಇರುವ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಬೇಕೆಂದೂ ಪೊಲಿಟ್‌ಬೂರೋ ಅವರನ್ನು ವಿನಂತಿಸುತ್ತದೆ.

●

ವೇತನ ಏರಿಸಲು ಕಾಫಿ ಕ್ಯೂರಿಂಗ್ ಕಾರ್ಮಿಕರ ಒತ್ತಾಯ

ಸಿ. ಐ. ಟಿ. ಯು. ನೇತೃತ್ವದಲ್ಲಿರುವ ಚಿಕ್ಕಮಗಳೂರು-ಹಾಸನ ಜಿಲ್ಲಾ ಸಾಮಿಲ್ಸ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್ ಮೂಲಕ ತಾ. 10-11-79 ರಂದು ಚಿಕ್ಕಮಗಳೂರಿನ ಎಲ್ಲಾ ಕಾಫಿ ಕ್ಯೂರಿಂಗ್ ಕಾರ್ಖಾನೆಗಳ ಆಡಳಿತ ವರ್ಗಕ್ಕೆ ಬೇಡಿಕೆಗಳ ಪಟ್ಟಿಯನ್ನು ಕಳಿಸಲಾಗಿದೆ. ಕಾಫಿ ಕ್ಯೂರಿಂಗ್ ಕೆಲಸಗಾರರ ಪರವಾಗಿ ಸಂಘದ ಕಾರ್ಯದರ್ಶಿ ಕಾಂ. ವಿಶ್ವನಾಥ್ ಬೇಡಿಕೆಗಳನ್ನು ಮಂಡಿಸಿದ್ದಾರೆ. ಅಲ್ಲದೆ, ಬೇಡಿಕೆಗಳನ್ನು ಹದಿನೈದು ದಿನಗಳ ಒಳಗಾಗಿ ಇತ್ಯರ್ಥಪಡಿಸಬೇಕೆಂದು ಆಡಳಿತ ವರ್ಗಕ್ಕೆ ಒತ್ತಾಯಿಸಿದ್ದಾರೆ.

ಬೇಡಿಕೆಗಳಲ್ಲಿ, ಮೂರು ವರ್ಷಕ್ಕಿಂತ ಮೇಲ್ಪಟ್ಟು ಕೆಲಸ ಮಾಡಿರುವ ಪ್ರಥಮದರ್ಜೆ ಗುಮಾಸ್ತರು, ಫೋರ್‌ಮನ್ ಮತ್ತು ಉಗ್ರಾಣದ ಗುಮಾಸ್ತರಿಗೆ ಮೂಲ ವೇತನವನ್ನು ತಿಂಗಳಿಗೆ ರೂ.400 ರಂತೆಯೂ, ii) ದ್ವಿತೀಯ ದರ್ಜೆ ಗುಮಾಸ್ತರು, ಉಗ್ರಾಣದ ಗುಮಾಸ್ತರು ಮತ್ತು ಟೈಪಿಸ್ಟ್‌ಗಳಿಗೆ ತಿಂಗಳಿಗೆ ಮೂಲ ವೇತನ ರೂ. 350 ರಂತೆ,

iii) ಜೂನಿಯರ್ ಫೋರ್‌ಮನ್, ಕಾವಲುಗಾರರು, ಜವಾನರುಗಳಿಗೆ ಮೂಲ ವೇತನ ತಿಂಗಳಿಗೆ ರೂ. 300,

iv) ಲಾರಿ ಚಾಲಕರು, ಮೆಕಾನಿಕ್‌ಗಳು ಮತ್ತಿತರ ಮೆಷೀನ್ ಆಪರೇಟರ್‌ಗಳಿಗೆ ಮೂಲ ವೇತನ ತಿಂಗಳಿಗೆ ರೂ. 240,

v) ಲಾರಿ ಕಂಡಕ್ಟರ್‌ಗಳಿಗೆ ತಿಂಗಳಿಗೆ ರೂ. 200 ಮೂಲ ವೇತನ ಸಿಗಬೇಕು ಹಾಗೂ,

vi) ದಿನಗೂಲಿ ಕೆಲಸಕ್ಕೆ ಬರುವ ಕಾರ್ಮಿಕರಿಗೆ ಕನಿಷ್ಠ ಕೂಲಿ ದಿನಕ್ಕೆ ರೂ. 10 ಸಿಗಬೇಕೆಂದು ಸಂಘ ಒತ್ತಾಯಿಸಿದೆ.

○

ನ್ಯಾಯಾಧೀಶರಿಗೆ ಬೆದರಿಕೆ ಯತ್ನ

ಸುಪ್ರೀಂ ಕೋರ್ಟಿನ ವರಿಷ್ಠ ನ್ಯಾಯಾಧೀಶರಿಗೆ ಬೆದರಿಕೆಯೊಡ್ಡಲು ನಡೆಸಲಾದ ಪ್ರಯತ್ನವನ್ನು ಸಿ. ಪಿ. ಐ. (ಎಂ) ನ ಪೊಲಿಟ್‌ಬ್ಯೂರೋ ತೀವ್ರವಾಗಿ ಖಂಡಿಸುತ್ತದೆ. ಈ ಬೆದರಿಕೆಯೊಡ್ಡಲು ನಡೆದ ಪ್ರಯತ್ನದ ಕಡೆಗೆ ಜನತೆಯ ಗಮನವನ್ನು ಸೆಳೆದ ಮುಖ್ಯ ನ್ಯಾಯಾಧೀಶರು ಹೀಗೆ ಬೆದರಿಕೆ ಹಾಕಿದ ಕಾಂಗ್ರೆಸ್ (ಐ) ಪಕ್ಷದೊಡನೆ ನಿಕಟ ಸಂಪರ್ಕವಿರಿಸಿಕೊಂಡವನೆನ್ನಲಾದ ವ್ಯಕ್ತಿಯೊಬ್ಬನನ್ನು ಹೆಸರಿಸಿದ್ದಾರೆ.

ಈಗ ಕಾಂಗ್ರೆಸ್ (ಐ) ಪಕ್ಷದ ಅಧ್ಯಕ್ಷೆಯಾಗಿರುವ ಮಾಜಿ ಪ್ರಧಾನಿಯ ಸುತ್ತುಮುತ್ತ ಇರುವ ದುಷ್ಟಕೂಟದ ನಿಜಸ್ವರೂಪವೇನೆಂಬುದನ್ನೂ, ನ್ಯಾಯಾಂಗ ಮತ್ತು ಕಾರ್ಯಾಂಗವನ್ನು ತಮ್ಮ ಇಚ್ಛೆಗನುಸಾರ ಮಣಿಸಲು ಅವರು ಎಂತಹ ನೀಚಮಟ್ಟಕ್ಕೂ ಇಳಿಯಬಲ್ಲರೆಂಬುದನ್ನೂ ಈ ಘಟನೆ ತೋರಿಸಿಕೊಟ್ಟಿದೆ. ತುರ್ತುಪರಿಸ್ಥಿತಿಯ ಕಾಲದಲ್ಲಿ ಈ ದುಷ್ಟಕೂಟ ಏನೇನು ಮಾಡಿದೆಯೆಂಬುದನ್ನೂ ಇದು ಮರಳಿ ನೆನಪು ಮಾಡಿಕೊಟ್ಟಿದೆ ಮಾತ್ರವಲ್ಲ; ಕಾಂಗ್ರೆಸ್ (ಐ) ಮುಂದಾಳುಗಳು ಸರಕಾರೀ ಯಂತ್ರವನ್ನು ತಮ್ಮ ಕೈವಶ ಮಾಡಿಕೊಳ್ಳುವಲ್ಲಿ ಸಫಲರಾದರೆ ಏನಾದೀತುಎಂಬಬಗ್ಗೆ ಎಚ್ಚರಿಕೆನೀಡಿದೆ.

●

ಯುವಕ ಮಂಡಲ ವತಿಯಿಂದ ಕಬಡ್ಡಿ ಪಂದ್ಯ

ಕುಂದಾಪುರ ತಾಲ್ಲೂಕಿನ ವಡೇರ ಹೋಬಳಿ ಗ್ರಾಮಕ್ಕೆ ಸೇರಿದ ವಿಠಲವಾಡಿ ಯುವಕ ಮಂಡಲದ ನೇತೃತ್ವದಲ್ಲಿ ನಡೆದ ಕಬಡ್ಡಿ ಪಂದ್ಯದ ಸಮಾರೋಪ ಸಮಾರಂಭವು ದ.ಕ. ಜಿಲ್ಲಾ ಎಸ್.ಎಫ್.ಐ. ಉಪಾಧ್ಯಕ್ಷರಾದ ಶ್ರೀ ಆರ್. ಜಯಕುಮಾರ್‌ರವರ ಅಧ್ಯಕ್ಷತೆಯಲ್ಲಿ ತಾ.18.11.79 ರಂದು ನಡೆಯಿತು. ಕುಂದಾಪುರ ತಾಲ್ಲೂಕು ಯುವಕ ಮಂಡಲದ ಕಾರ್ಯದರ್ಶಿ ಶ್ರೀ ಮಹಾಬಲರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಗ್ರಾಮದ ಹಿರಿಯರಾದ ಶ್ರೀ ಶೇಖರ್‌ರವರು ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು.

ಕೋಣಿ, ಬೊಬ್ಬರ್ಯನ ಕಟ್ಟೆ, ಮದ್ದುಗುಡ್ಡೆ, ವಡೇರ ಹೋಬಳಿ ಮತ್ತು ವಿಠಲವಾಡಿ ಯುವಕ ಮಂಡಲಗಳ ಸದಸ್ಯರು ಪಂದ್ಯದಲ್ಲಿ ಭಾಗವಹಿಸಿದ್ದು ಅಂತಿಮವಾಗಿ ವಿಠಲವಾಡಿ 'ಎ' ತಂಡದವರು ಪ್ರಥಮ ಬಹುಮಾನವನ್ನು, ವಡೇರಹೋಬಳಿ ತಂಡದವರು ದ್ವಿತೀಯ ಬಹುಮಾನವನ್ನು ಪಡೆದರು.

●

ಹಂಚಿನ ಕಾರ್ಮಿಕರಿಗೆ ವಿಶೇಷ ಭತ್ಯ ಲಭ್ಯ

ದ. ಕ. ಜಿಲ್ಲೆ. ಮಂಗಳೂರಿನ ಹಂಚಿನ ಮಜೂರರ ಒಪ್ಪಂದ 1980 ನೇ ಅಕ್ಟೋಬರ್‌ಗೆ ಆಖೇರಿಯಾಗುವುದಾದರೂ, ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್ ಆಶ್ರಯದಲ್ಲಿ ಸಂಘಟನೆಯಾದ ಕಾರ್ಮಿಕರು ಈಗಿನ ಪರಿಸ್ಥಿತಿಯನ್ನು ಗಮನಿಸಿ ಈಗ ಸಿಗುವ ವೇತನದ ಶೇಕಡ 30 ಸ್ಪೆಷಲ್ ಎಲವೆನ್ಸ್ ದೊರೆಯಬೇಕೆಂಬ ಕೇಳಿಕೆಯನ್ನು ಹಂಚಿನ ಮಾಲಕರ ಮುಂದಿಟ್ಟರು. ಈ ಕೇಳಿಕೆಯನ್ನು ಪಡೆಯಲು ಬೇಕಾದ ಸಿದ್ಧತೆಯು ಎಲ್ಲಾ ಹಂಚಿನ ಕಾರ್ಖಾನೆಯಲ್ಲಿಯೂ ನಡೆಯಿತು. ಈ ಮಧ್ಯೆ ಮಾಲಕರು ಪಂಚಾಯತಿಗೆ ಕರೆದು ಪಂಚಾಯತಿಗೆ ಹಲವು ಸಲ ನಡೆದರೂ ಇತ್ಯರ್ಥವಾಗದೆ ತಾ. 12-10-1979 ರಂದು ಪರಿಸ್ಥಿತಿಯ ಗಂಭೀರತೆ ಮನಗೊಂಡ ಅಸಿಸ್ಟೆಂಟ್ ಲೇಬರ್ ಕಮಿಶನರ ಮುಂದೆ ಪಂಚಾಯತಿಗೆ ನಡೆದು ತಾ. 1-9-79 ರಿಂದ ಈಗ ಸಿಗುವ ವೇತನದಲ್ಲಿ ಶೇಕಡ 19.25 ರಷ್ಟು ಸ್ಪೆಶಲ್ ಭತ್ಯೆಕೊಡಲು ನಿರ್ಧರಿಸಿದರು. ಮಜೂರರ ಪರವಾಗಿ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಕಾಂ. ಬಿ. ಕೊರಗಪ್ಪ ರೈ ಮತ್ತು ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾಯರು ಹಾಜರಿದ್ದರು.

●

ದ.ಕ. ಜಿಲ್ಲಾ ರಿಕ್ಷಾ ಚಾಲಕರ ಪ್ರಥಮ ಯಶಸ್ವಿ ಸಮ್ಮೇಳನ

ದ. ಕ. ಜಿಲ್ಲೆಯ ರಿಕ್ಷಾ ಚಾಲಕರ ಪ್ರಥಮ ಸಮ್ಮೇಳನವು ಸಿ. ಐ. ಟಿ.ಯು.ವಿನ ದ. ಕ. ಜಿಲ್ಲೆಯ ರಿಕ್ಷಾ ಚಾಲಕರ ಸಂಘದ ಆಶ್ರಯದಲ್ಲಿ ತಾ. 18-11-79 ರಂದು ಮಂಗಳೂರಿನ ಬಿಕ್ಷು ಲಕ್ಷ್ಮಣಾನಂದ ಹಾಲಿನಲ್ಲಿ ಕಾಂ. ಪಿ. ರಾಮಚಂದ್ರರಾವ್, ಪ್ರಖ್ಯಾತ ವಕೀಲರಾದ ವೆಂಕಟರಮಣ ಭಟ್, ಜೆ.ಡಿ.ಸೋಜ ಮತ್ತು ಸನತ್‌ಕುಮಾರ್ ಇವರುಗಳ ಅಧ್ಯಕ್ಷತೆಯಲ್ಲಿ ಸೇರಿ ರಿಕ್ಷಾ ಚಾಲಕರ ಮುಂದಿರುವ ವಿಶಿಷ್ಟ ಸಮಸ್ಯೆಗಳನ್ನು ಚರ್ಚಿಸಿ ತೀರ್ಮಾನಮಾಡಲಾಯಿತು.

ಈ ಸಮ್ಮೇಳನಕ್ಕೆ ಬೆಂಗಳೂರು ನಗರದಿಂದ 6 ಜನ ಸೌಹಾರ್ದ ಪ್ರತಿನಿಧಿಗಳೂ, ಜಿಲ್ಲೆಯ ಎಲ್ಲಾ ಮೂಲೆಗಳಿಂದ 176 ಪ್ರತಿನಿಧಿಗಳೂ ಭಾಗವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀಯುತ ಬಿ. ಎಸ್. ಪರಮೇಶ್ವರನವರು ಸಮ್ಮೇಳನದ ಪ್ರತಿನಿಧಿಗಳನ್ನು ಸ್ವಾಗತಿಸಿ ಮಂಗಳೂರಿನ ರಿಕ್ಷಾ ಚಾಲಕರ ಹೋರಾಟದ ಪರಂಪರೆಯನ್ನು ವಿವರಿಸಿ, ಸಿ.ಐ.ಟಿ.ಯು. ನೇತೃತ್ವದಲ್ಲಿ ರಿಕ್ಷಾ ಚಾಲಕರು ಜಿಲ್ಲೆಯಲ್ಲಿ ಹಾಗೂ ರಾಜ್ಯದಲ್ಲಿ ಮುನ್ನಡೆಯಬೇಕೆಂದು ಹಾರೈಸಿದರು. ರಿಕ್ಷಾ ಚಾಲಕರು ಮತ್ತು ಮಾಲಕರು ಎದುರಿಸುತ್ತಿರುವ 31 ಪ್ರಶ್ನೆಗಳ ಕುರಿತು ವಿಮರ್ಶೆ ನಡೆದು ಎಲ್ಲಾ ಬೇಡಿಕೆಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಜಿಲ್ಲೆಯ ವಿವಿಧ ಭಾಗಗಳ ರಿಕ್ಷಾ ಚಾಲಕರ ಪ್ರತಿನಿಧಿಗಳನ್ನೊಳಗೊಂಡ 35 ಮಂದಿಯ ಫೆಡರೇಷನ್ ರಚಿಸುವ ಸಂಘಟನಾ ತೀರ್ಮಾನವನ್ನು ಸಮ್ಮೇಳನವು ಕೈಗೊಂಡಿತು.

ಸಂಜೆ 5 ಗಂಟೆಗೆ ಸರಿಯಾಗಿ ಮೋರ್ಗನ್‌ಗೇಟ್, ಕಂಕನಾಡಿ, ಬಲ್ಮಟ ಹಂಪನಕಟ್ಟೆ ಮಾರ್ಗವಾಗಿ ರಿಕ್ಷಾ ಚಾಲಕರ ಬೃಹತ್ ಮೆರವಣಿಗೆಯು ಜೋರಾಗಿ ಮಳೆ, ಗಾಳಿ, ಗುಡುಗು ಮಿಂಚುಗಳನ್ನು ಲಕ್ಷಿಸದೆನಡೆದು ನೆಹರೂ ಮೈದಾನದಲ್ಲಿ ಬಹಿರಂಗ ಸಭೆ ಸೇರಿತು.

ಕಾಂ. ಬಿ. ಎಸ್. ಪರಮೇಶ್ವರನವರು ಅಧ್ಯಕ್ಷತೆ ವಹಿಸಿದ್ದರು. ಕಾಂ. ಮಾಧವಶೆಟ್ಟಿಯವರು ಸಭೆಯನ್ನು ಸ್ವಾಗತಿಸಿದರು. ಸುಳ್ಯದ ಪ್ರಖ್ಯಾತ ವಕೀಲರೂ, ಸಮಾಜ ಕಾರ್ಯಕರ್ತರೂ ಆದ ಕಾಂ. ಸೂರ್ಯನಾರಾಯಣಭಟ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಿ.ಐ.ಟಿ.ಯು. ಜಿಲ್ಲಾ ಘಟಕದ ಕಾರ್ಯದರ್ಶಿಗಳೂ, ಕಾರ್ಮಿಕ ಮುಖಂಡರೂ ಆದ ಕಾಂ. ಪಿ. ರಾಮಚಂದ್ರರಾವ್ ಹಾಗೂ ಶ್ರೀಯುತ ಪಿ. ಸುರೇಶ್ ಮೂಲ್ಯರವರೂ ರಿಕ್ಷಾ ಚಾಲಕರು ಅನುಭವಿಸುತ್ತಿರುವ ಬವಣೆಗಳ ಬಗ್ಗೆ ಮಾತನಾಡಿದರು.

ಈ ಸಮ್ಮೇಳನದ ಕರೆಯನ್ನು ಅನುಸರಿಸಿ ಜಿಲ್ಲೆಯಾದ್ಯಂತ ರಿಕ್ಷಾ ಚಾಲಕರು ಮತ್ತು ಮಾಲಕರು ರಿಕ್ಷಾ ಬಂದ್ ಮಾಡಿದ್ದನ್ನು ಉಲ್ಲೇಖಿಸಿ ಈ ರೀತಿ ಶಿಸ್ತುಬದ್ಧವಾಗಿ ಸಂಘಟಿತರಾದರೆ ಮಾತ್ರ ನಮ್ಮ ಎದುರಿಗಿರುವ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯ ಎಂದು ಅಧ್ಯಕ್ಷರು ವಿವರಿಸಿದರು.

ಶ್ರೀಯುತ ಕೇಶವ ಅಮೀನ್ ಅವರು ಧನ್ಯವಾದಗಳನ್ನು ಅರ್ಪಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು. ○

ಕೋಲಾರದಲ್ಲಿ ರೈತರ ಬೃಹತ್ ಮತಪ್ರದರ್ಶನ

ಕೋಲಾರ ತಾಲ್ಲೂಕು ರೈತಸಂಘದ ಆಶ್ರಯದಲ್ಲಿ ರೈತ ಕೃಷಿಕೂಲಿಗಾರರ ಬೃಹತ್ ಮೆರವಣಿಗೆಯು 15-11-79 ರಂದು ನಡೆಯಿತು. ಕಾಂ. ಆರ್. ವೆಂಕಟರಾಮಯ್ಯನವರ ನೇತೃತ್ವದಲ್ಲಿ ರೈತಸಂಘದ ಆಫೀಸಿನಿಂದ ಒಂದು ಗಂಟೆಗೆ ಹೊರಟ ಮೆರವಣಿಗೆಯು ಜಿಲ್ಲಾಧಿಕಾರಿ ಮತ್ತು ತಹಸೀಲ್ದಾರರವರ ಕಛೇರಿಗೆ ತೆರಳಿ ಮನವಿ ಕೊಡಲಾಯಿತು. ತಮ್ಮ ಬೇಡಿಕೆಗಳ ಮನವಿಯನ್ನು ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು ಮತ್ತು ವಿದ್ಯುತ್ ಇಲಾಖೆಯ ಅಸಿಸ್ಟೆಂಟ್ ಎಂಜಿನೀಯರ್ ಅವರಿಗೂ ಕೊಡಲಾಯಿತು.

ಸಂಜೆ ನಾಲ್ಕು ಗಂಟೆಗೆ ಕೋಲಾರ ಬಸ್‌ನಿಲ್ದಾಣದ ಬಳಿ ಇರುವ ಪಾರ್ಕಿನಲ್ಲಿ ಪ್ರಾಂತ ರೈತಸಂಘದ ಅಧ್ಯಕ್ಷ ಹೆಚ್. ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಸೇರಿತು. ಬಹಿರಂಗ ಸಭೆಯನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎ. ಕೆ. ಭಟ್, ರೈತ ಮುಂದಾಳು ಕಾಂ ಪಿ. ಜಗನ್ನಾಥ, ಕೋಲಾರ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಲಕ್ಷ್ಮಣರೆಡ್ಡಿ, ರೈತಕಾರ್ಮಿಕ ಮುಂದಾಳು ಕಾಂ. ಲಕ್ಷ್ಮಯ್ಯ, ತಾಲ್ಲೂಕು ರೈತಸಂಘದ ಅಧ್ಯಕ್ಷ ಕಾಂ. ಬಿ. ಕೃಷ್ಣಪ್ಪ, ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ವೆಂಕಟ್ರಾಮಯ್ಯ ಮೊದಲಾದವರು ಮಾತನಾಡಿದರು. ಕಾಂ. ವೀರಭದ್ರಪ್ಪನವರು ಸ್ವಾಗತ ಮಾಡಿದ್ದರು. ಕಾಂ. ಹನುಮಪ್ಪನವರು ವಂದನಾರ್ಪಣೆ ಮಾಡಿದರು. ಈ ಸಭೆ, ಮೆರವಣಿಗೆಗಳಲ್ಲಿ ಬಹಳ ಮಂದಿ ವಿದ್ಯಾರ್ಥಿಗಳೂ ಭಾಗವಹಿಸಿದ್ದರು. ವಿದ್ಯಾರ್ಥಿ ಮುಖಂಡ ಕಾಂ. ಶಿವಾನಂದರವರೂ ಮಾತನಾಡಿದರು.

ಸಣ್ಣ ರೈತರ ಸಾಲ ರದ್ದತಿ, ಬಂಜರುಭೂಮಿ ಬಡವರಿಗೆ ಹಂಚಬೇಕು, ದರ್ಖಾಸ್ತು ಅರ್ಜಿಗಳ ವಿತರಣೆಯಾಗಬೇಕು, ಕೆಲಸಕ್ಕೆ ಕಾಳು ಕಾರ್ಯಕ್ರಮ ಪಂಚಾಯಿತಿಗಳ ಮೂಲಕವೇ ನಡೆಯಬೇಕು ಎಂಬಿತ್ಯಾದಿ ಹನ್ನೆರಡು ಬೇಡಿಕೆಗಳು ಮನವಿಯಲ್ಲಿ ಸೇರಿದ್ದವು. ●

ಸಿ. ಪಿ. ಐ. (ಎಂ) ಕರೆ

[ಒಂದನೇ ಪುಟದಿಂದ]

ರುವ ಬೇಡಿಕೆ ಇನ್ನೂ ವಿಚಿತ್ರವಾದದ್ದು. ಇಂತಹ ವರ್ತನೆ ಕೋಮುವಾದ ಮತ್ತು ನಿರಂಕುಶಾಧಿಕಾರದ ವಿರುದ್ಧ ಹೋರಾಟ ನಡೆಸಬೇಕಾಗಿರುವ ಶಕ್ತಿಗಳ ಐಕ್ಯಕ್ಕೆ ಎಳ್ಳಷ್ಟೂ ಸಹಕಾರಿಯಾಗಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಎರಡೂ ಪಕ್ಷಗಳ ಮುಖಂಡರೂ ಒಟ್ಟು ಮೊತ್ತದಲ್ಲಿ ತಮಗೆಷ್ಟು ಪಾಲು ಸಿಗಬೇಕೆಂದು ಆಸಕ್ತಿ ತಳೆದಿದ್ದಾರೆಯೇ ಹೊರತು ಎಡಪಕ್ಷಗಳೊಡನೆ ಸೇರಿ ಆ ಮೊತ್ತವನ್ನು ಆದಷ್ಟು ಹೆಚ್ಚಿಸಲು ಉತ್ಸುಕರಾಗಿಲ್ಲವೆನ್ನುವುದೂ ಸ್ಪಷ್ಟ.

ಸ್ಥಾನಗಳ ಹಂಚೋಣದ ಪ್ರಶ್ನೆಯಲ್ಲಿ ಹೀಗೆ ವಿವಾದ ನಡೆಯುತ್ತಿರುವ ಸಮಯದಲ್ಲೇ ಇನ್ನೂ ಒಂದು ಕಳವಳಕಾರಕ ವಾರ್ತೆ ಕೇಳಿಬರುತ್ತಿದೆ. ಈ ವಾರ್ತೆ ನಿಜವಾಗಿದ್ದರೆ ಎರಡೂ ಪಕ್ಷಗಳಿಗೆ ಸಮ್ಮತವಾಗಿರುವ ಮುಂದಾಳುವಿನ ಆಯ್ಕೆಯ ಪ್ರಶ್ನೆಯೂಮತ್ತೊಮ್ಮೆ ಸಂದೇಹದ ಸುಳಿಯಲ್ಲಿ ಸಿಕ್ಕಿದಂತೆಯೇ ಸರಿ. ಮಂತ್ರಿಪದವಿಯನ್ನು ತ್ಯಜಿಸಿ ಜಗಜೀವನರಾಮ್ ಅವರ ನೇತೃತ್ವದಲ್ಲಿ ಎಲ್ಲಾ ಕಾಂಗ್ರೆಸ್ಸಿಗರನ್ನೂ ಒಂದುಗೂಡಿಸಬೇಕೆಂದು ಕೆಲವು ಕಾಂಗ್ರೆಸ್ ಮಂತ್ರಿಗಳು ನಡೆಸುತ್ತಿರುವ ಪ್ರಯತ್ನಗಳ ಕುರಿತು ಇಲ್ಲಿ ಪ್ರಸ್ತಾಪಿಸುತ್ತಿದ್ದೇವೆ. ಇಂತಹ 'ಮರುಹೊಂದಾಣಿಕೆ' ಲೋಕದಳ ಮತ್ತು ಕಾಂಗ್ರೆಸ್ಸಿನ ಮೈತ್ರಿಯನ್ನು ಭಂಗಗೊಳಿಸಿ ಇಂದಿರಾ ಕಾಂಗ್ರೆಸ್ಸಿನ ದಾರಿಯನ್ನು ಸುಗಮಗೊಳಿಸುವುದು ಖಂಡಿತ. ಈ ಕುತಂತ್ರವನ್ನು ಸೋಲಿಸಿ ಕಾಂಗ್ರೆಸ್ ಮತ್ತು ಲೋಕದಳ ಹಾಗೂ ಎಡಪಕ್ಷಗಳ ಮೈತ್ರಿಯನ್ನು ಉಳಿಸಿಕೊಳ್ಳಲೇಬೇಕು. ಅದರೊಂದಿಗೆ ಜನತಾಪಕ್ಷದೊಳಗೆ ಈಗಲೂ ಇರಬಹುದಾದ ಜಾತ್ಯತೀತ ಶಕ್ತಿಗಳು ಈ ಮೈತ್ರಿಕೂಟವನ್ನು ಸೇರುವ ಹಾಗಿದ್ದರೆ ಅವರಿಗಾಗಿ ಮೈತ್ರಿಕೂಟದ ಪ್ರವೇಶ ಮುಕ್ತವಾಗಿರಬೇಕು.

ಚುನಾವಣೆಗಳು ನಡೆಯಲು ಇನ್ನು ಕೇವಲ ಒಂದು ತಿಂಗಳು ಮತ್ತುಕೆಲವೇ ದಿನಗಳು ಉಳಿದಿರುವ ಕಾರಣ ಈ ಕೆಲಸದ ಕಡೆಗೆ ತುರ್ತು ಗಮನ ನೀಡಬೇಕಾಗಿದೆ. ಪರಸ್ಪರ ಪ್ರತಿಸ್ಪರ್ಧಿಗಳಾದ ಕಾಂಗ್ರೆಸ್ (ಐ) ಮತ್ತು ಜನತಾಪಕ್ಷಗಳು ಈಗಾಗಲೇ ಭರದಿಂದ ತಮ್ಮ ಪ್ರಚಾರ ಕಾರ್ಯವನ್ನು ಪ್ರಾರಂಭಿಸಿವೆ. ಇವುಗಳ ಆರ್ಭಟ ತಣ್ಣಗಾಗಬೇಕಾದರೆ ಎಡಪಕ್ಷಗಳ ಮುಖಂಡರೊಡನೆ ಪ್ರಧಾನಿ ಮತ್ತು ಉಪಪ್ರಧಾನಿ ಸಮಾಲೋಚನೆ ನಡೆಸಿ ಸಮಾನ ಅಭ್ಯರ್ಥಿಗಳ ಪಟ್ಟಿಯ ಆಧಾರದ ಮೇಲೆ ಜಂಟಿ ಪ್ರಚಾರ ಕೈಗೊಂಡರೆ ಮಾತ್ರ ಸಾಧ್ಯ. ಕಾಂಗ್ರೆಸ್ ಮತ್ತು ಲೋಕದಳಗಳು ಈ ತುರ್ತು ಅವಶ್ಯಕತೆಯನ್ನು ಗಮನಿಸಿ ಸೂಕ್ತಕ್ರಮಗಳನ್ನು ಕೂಡಲೇ ಕೈಗೊಳ್ಳಲಿ. ●

ತಿಪಟೂರು- ಪಿ.ಡಬ್ಲ್ಯು.ಡಿ. ಕೆಲಸಗಾರರ ಸಭೆ

ತಿಪಟೂರು P. W. D. ಕೆಲಸಗಾರರ ಸಭೆಯು ಕಾಂ. ಬಿ. ಡಿ. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ 2-12-79 ರಂದು ತಿಪಟೂರು ತುರುವೇಕೆರೆ, ಚಿಕ್ಕನಾಯ್ಕನಹಳ್ಳಿ ತಾಲ್ಲೂಕು P. W. D. ಕೆಲಸಗಾರರ ಸಮ್ಮೇಳನವನ್ನು ತಿಪಟೂರಿನಲ್ಲಿ ನಡೆಸಬೇಕೆಂದು ತಿರ್ಮಾನಿಸಲಾಯಿತು. ಅದಕ್ಕಾಗಿ ಸಿದ್ಧತೆ ನಡೆಸಲು ಒಂದು ಸಮಿತಿಯನ್ನು ರಚಿಸಲಾಯಿತು. ತಿಪಟೂರು P. W. D. ಕೆಲಸಗಾರರ ಸಂಘವನ್ನು ರಿಜಿಸ್ಟರ್ ಮಾಡಿಸಬೇಕೆಂದೂ ಇದು ತುರುವೇಕೆರೆ, ತಿಪಟೂರು, ಚಿಕ್ಕನಾಯ್ಕನಹಳ್ಳಿ ತಾಲ್ಲೂಕುಗಳ ವ್ಯಾಪ್ತಿಗೆ ಒಳಪಟ್ಟಿರಬೇಕೆಂದೂ ತಿರ್ಮಾನಿಸಲಾಯಿತು. ಚಪ್ಪಲಿ, ಯೂನಿಫಾರಂ, ಗುದ್ದಲಿ ಚೂಪುಮಾಡಿಸಲು ಹಣ, ರೈನ್ ಕೋಟ್, ಸೈಕಲ್ ಅಲೋವೆನ್ಸ್, ಕೆಲಸದ ಭದ್ರತೆ ಭಾನುವಾರ ಸಂಬಳ ಸಹಿತ ರಜೆ ಪ್ರಾವಿಡೆಂಟ್ ಫಂಡ್ ದಿನಕ್ಕೆ 8 ರೂ. ಕೂಲಿ ಮುಂತಾದ ಬೇಡಿಕೆಗಳಿಗಾಗಿ ಹೋರಾಡಬೇಕೆಂದು ತಿರ್ಮಾನಿಸಲಾಯಿತು. ಸಭೆಯನ್ನು ಉದ್ದೇಶಿಸಿ ಗುಬ್ಬಿ ತಾಲ್ಲೂಕು ಪಿ. ಡಬ್ಲ್ಯು. ಡಿ. ಕೆಲಸಗಾರರ ಸಂಘದ ಅಧ್ಯಕ್ಷ ಹೆಚ್. ಸಿ. ಚನ್ನಪ್ಪ, ಯೂನಿಯನ್ ಸೆಕ್ರೆಟರಿ ಕಾಂ. ದಯಾಮಯ, ರೈತಮುಖಂಡ ಕಾಂ. ಆರ್. ಎಸ್. ಚನ್ನಬಸವಣ್ಣ, ಕಾರ್ಮಿಕ ಮುಂದಾಳು ಮುನಿಯಪ್ಪ, ಕಾಂ. ಕೋದಂಡರಾಮ ಮುಂತಾದವರು ಮಾತನಾಡಿದರು. ○

ಭಾರಿ ಮತಪ್ರದರ್ಶನ

[ಒಂದನೇ ಪುಟದಿಂದ]

ಮುಂದಾಳು ಕಾಂ. ಪಿ. ರಾಮಚಂದ್ರರಾವ್ ಘೋಷಿಸಿದರು. ಬೇಡಿಕೆಗಳು ಈಡೇರಿಲ್ಲವಾದರೆ ಚಳುವಳಿಯನ್ನು ತೀವ್ರಗೊಳಿಸಲಾಗುವುದು ಎಂದು ಕೊನೆಗೆ ಧನ್ಯವಾದವನ್ನು ಅರ್ಪಿಸುತ್ತಾ ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಜನಾರ್ಧನ ನಾಯಕ್ ಸಾರಿದರು.

21ರ ಕಾರ್ಯಕ್ರಮವು ರೈತ ಮತ್ತು ಕಾರ್ಮಿಕರ ಬೆಳೆದುಬರುತ್ತಿರುವ ಒಗ್ಗಟ್ಟಿನ ಪ್ರತೀಕವಾಗಿದೆ. ಜಿಲ್ಲೆಯ ಮಾತ್ರವೇ ಅಲ್ಲ ರಾಜ್ಯದ ರೈತಕಾರ್ಮಿಕರ ಹೋರಾಟಕ್ಕೆ ಸ್ಫೂರ್ತಿ ಇತ್ತಿದೆ. ○

ಪರಿಸರ

ಹೆಚ್. ಎನ್. ಬಹುಗುಣ ಅವರು ಕಾಂಗ್ರೆ ಸೇರಿರುವುದನ್ನು ಸಿ. ಪಿ. ಐ. ಅಧ್ಯಕ್ಷ ಎಸ್. ಎ. ಡಾಂಗೆ ಅವರು ಅಭಿನಂದಿಸಿದ್ದಾರೆ.

—ಆಲ್ ಇಂಡಿಯಾ ರೇಡಿಯೋ

ಬಹುಗುಣ ಅವರು ತಮ್ಮ ಭವಿಷ್ಯವನ್ನು ತಾವೇ ಹಾಳುಮಾಡಿಕೊಳ್ಳುತ್ತಿದ್ದಾರೆ. ಕಾಂಗ್ರೆಯಲ್ಲಿ ಯಾರಿಗೂ ಪ್ರಜಾಸತ್ತಾತ್ಮಕ ಸ್ಥಾನಮಾನಗಳಿರುವುದಿಲ್ಲ. ಬಹುಗುಣ ಅವರು ಮೇಡಂ ಗಾಂಧಿ ಅವರ ಅಪ್ಪಣೆಯನ್ನು ಮಾತ್ರ ಪಾಲಿಸಬೇಕಾಗುವುದು.

—ಸಿ. ರಾಜೇಶ್ವರರಾವ್
ಸಿ. ಪಿ. ಐ. ಪ್ರಧಾನ ಕಾರ್ಯದರ್ಶಿ

ಧಾರವಾಡ ಜಿಲ್ಲೆಯ ಕಾಂಗ್ರೆ ಅಭ್ಯರ್ಥಿಗಳ ಸಮಾಲೋಚನಾ ಸಭೆಯಲ್ಲಿ ಚಪ್ಪಲಿಗಳನ್ನು ಎಸೆಯುತ್ತ ಘೋಷಣೆಗಳನ್ನು ಕೂಗಲಾಯಿತು.

—ದಿ ಟೈಮ್ಸ್ ಆಫ್ ಇಂಡಿಯಾ

ಎಡರಂಗ ಸರಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಬಡರೈತರು, ಕೃಷಿಕೂಲಿಗಾರರು ಸಣ್ಣಪುಟ್ಟ ಸಾಲ,ಸಹಾಯ ರಾಸಾಯನಿಕ ಗೊಬ್ಬರಗಳಂತಹ ಸಾಮಾನ್ಯ ವಿಷಯಗಳಿಗಾಗಿ ಎಸ್. ಡಿ. ಓ. ಮತ್ತು ಬಿ. ಡಿ. ಓ. ಕಛೇರಿಗಳ ಮುಂದೆ ಘೆರಾವೋಗಳನ್ನು ಸಂಘಟಿಸಲೇಬೇಕಿತ್ತು. ಈಗಲಾದರೋ ಪರಿಸ್ಥಿತಿ ತೀರ ಬದಲಾಯಿಸಿದೆ, ಅವುಗಳನ್ನು ಅವರು ತಮ್ಮ ಮನೆಯ ಬಾಗಿಲಿನಲ್ಲಿಯೇ ಪಡೆಯುತ್ತಿದ್ದಾರೆ.

—ಬಿರೇನ್ ಧತ್ತ
ತ್ರಿಪುರಾ ರೆವಿನ್ಯೂ ಮಂತ್ರಿ

ಆರ್. ಎಸ್. ಎಸ್. ಅಧಿಕಾರಕ್ಕೆ ಬಂದಲ್ಲಿ ಸದಾ ತುರ್ತುಪರಿಸ್ಥಿತಿಯ ವಾತಾವರಣವುಂಟಾಗುವುದರಲ್ಲಿ ಸಂದೇಹವಿಲ್ಲ.

—ಸಮದರ್ಶಿ
ದಿನಪತ್ರಿಕೆ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT